ವಸುಭ್ಯೋತ್ರಿಥವಾ ರುದ್ರೇಭ್ಯ ಆದಿತ್ಯೇಭ್ಯೋಽಥವಾ ಪುನಃ ।
ವೈಶ್ವದೇವ್ಯಸಿ ವಿಶ್ವೇಭ್ಯಃ ಪರಿಕ್ರೀಣಾಮ್ಯಹಂ ತತಃ ॥೫೯॥

ಕ್ಷಿಪ್ತ್ವಾ ಸುಮನಸಃ ಪೂರ್ವ ಮೋಷಧ್ಯಾ ಸಹ ವೀರುಧ್ಯೈಃ ।
ತಸ್ಯಾ ವೀರ್ಯಂ ಸಮಾದತ್ತೇ ಕರ್ಮ ಯತ್ರ ಕರಿಷ್ಯತಿ ॥೬೦॥

ತಾಂ ತು ಮೂರ್ಧ್ನೇ ನಿದಧೀತ ಓಷಧೀನಾಂ ವಿಹಾಯಸಿ ।
ಗ್ರಹಣೇತ್ವೌಷಧೀನಾಂ ತು ಸರ್ವತ್ರೈವ ವಿಧಿರ್ಭವೇತ್ ॥೬೧॥

ಉತ್ಥಾಪಯೀತ ತಾಂ ಪಾಟಾಂ ತ್ರಿಪಮಾಮಿತಿ ಜಪನ್ನಿಹ ।
ಪ್ರಾತಶ ಪ್ರೇಷಯೇದೇನಾಂ ಸಂಸದಿ ಬ್ರಹ್ಮಚಾರಿಣಾ ॥೬೨॥

ತವಲಾಭೇ ವ್ರತವತಾ ಕನ್ಯಯಾ ಬ್ರಾಹ್ಮಣೇನ ವಾ ।
ಪ್ರಾತಃ ಶುಚಿಸ್ತಾಂ ಘೃತೇನ ತ್ರಿಃ ಪಿಬೇದನುಮಂತ್ರಿತಾಮ್ ॥೬೩॥

ಇಮಾಮಿತಿ ತು ಸೂಕ್ತೇನ ಶತಕೃತ್ವೋ ದಶಾವರಮ್ ।
ಸಪತ್ನೀಂ ಬಾಧತೇ ತೇನ ಪತಿಶ್ಚಾತೀವ ಮನ್ಯತೇ ॥೬೪॥

ಪತಿಸ್ತು ಪರಿಜಪ್ಯೈನಾಂ ಪಾಟಾಮೇತೇನ ವೈಪಿಬೇತ್ ।
ಪಯಸಾ ಸಪ್ತರಾತ್ರಂ ತು ಸಪತ್ನಾನ್ಪ್ರತಿಬಾಧತೇ ॥೬೫॥

ಮೂಲಮಂತ್ರ ಜಪ್ತೈರಸ್ಯೈರ್ಯಾಪತಿಂ ಚೇತುಮಿಚ್ಛತಿ ।
ಅಲೋಕಾ ಯಮಲೋಕಸ್ಥಾ ಮಜ್ಜತೇ ನರಕೇ ಹಿ ಸಾ ॥೬೬॥

ಅನ್ಯಥಾ ವೋಪನೀತಾನಿ ಚೂರ್ಣ ಮೂಲೌಷಧಾನ್ಯಪಿ ।
ವಿನಾಶಯೇಯುಃ ಪುರುಷಂ ತಸ್ಮಾನ್ನಾನ್ಯಂ ಸಮಾಚರೇತ್ ॥೬೭॥

ಪ್ರಿಯಂ ವದಾ ಭರ್ತರಿ ವಾ ಭರ್ತಾ ಯಸ್ಯಾಃ ಪರಾಯಣಮ್ ।
ವಾಕ್ ಚೈವ ಮಧುರಾ ಯಸ್ಯಾಃ ಪತ್ಯುಃ ಸಂವನನಂ ಮಹತ್ ॥

ಪ್ರಿಯಂ ಭರ್ತಾರಮಾಸಾದ್ಯ ಪಿಬೇದೇ ವೌಷಧೀಮಿಮಾಮ್ ।
ಪ್ರಿಯಂ ವದಾಂ ಧರ್ಮಪರಾಂ ಧರ್ಮಪತ್ನೀ ಮನಿಂದಿತಾಮ್ ॥

ಅವಮನ್ಯೇತ ಯೋ ಮೋಹಾತ್ತಮಾಹುಃ ಪುರುಷಾಧಮಮ್ ।
ಆರಣ್ಯಾನೀತ್ಯರಣ್ಯೇಷು ಜಪೇತ್ಸೂಕ್ತಮನೇಕಶಃ ॥೭೦॥

ಆರಣ್ಯಾನೀಂ ನಮಸ್ಕೃತ್ವಾ ಸೋಽರಣ್ಯಾತ್ಪ್ರತಿಮುಚ್ಯತೇ ।
ಶ್ರದ್ಧಾ ಸೂಕ್ತಂ ಜಪೇನ್ನಿತ್ಯಂ ಶ್ರದ್ಧಾ ಕಾಮಃ ಸಮಾಹಿತಃ ॥೭೧॥

ಸರ್ವತ್ರ ಲಭತೇ ಶ್ರದ್ಧಾಂ ಮೇಧಾಸೂಕ್ತಂ ತಥೈವ ಚ ।
ಬ್ರಾಹ್ಮೀಮಾಸಾದ್ಯ ಸೂಕ್ತೇ ದ್ವೇ ಜಪೇತ್ ನಿಯತವ್ರತಃ ॥೭೨॥

ತಾಂ ಪಿಬೇತ್ತು ಯಥಾಶಕ್ತ್ಯಾ ತ್ರ್ಯಹಾತ್ಸಿದ್ಧಾಂ ನಿಯಚ್ಛತಿ ।
ಶಂಖಪುಷ್ಪೀಂ ತು ಪಯಸಾ ಬ್ರಾಹ್ಮೀ ಪುಷ್ಪಾಣಿ ಸರ್ಪಿಷಾ ॥೭೩॥

ಶತಾವರೀಂ ತು ಪಯಸಾ ವಚಾಮುದ್ಭಿರ್ಘೃತೇನ ವಾ ।
ಸೂಕ್ತಾಭ್ಯಾಮನು ಮಂತ್ರಾಭ್ಯಾಮೇಕೈಕಾಂ ತು
ತ್ರ್ಯಹಂ ಪಿಬೇತ್ ॥೭೪॥

ಶ್ರದ್ಧಾಂ ಮೇಧಾಂ ಸ್ಮೃತಿಂ ಪುಷ್ಟಿಂ ಬಲಂ ಲಕ್ಷ್ಮೀಂ ಚ ವಿಂದತಿ ।
ಸಿದ್ಧಿಂ ಪ್ರಾಪ್ನೋತಿ ಚ ಪರಾಂ ದೀರ್ಘಂ ಚಾಯುಃ ಸಮಶ್ನುತೇ ॥

ಅಥವಾ ಮನಸಾ ಧ್ಯಾಯೇತ್ಸೂಕ್ತೇ ಸಿದ್ಧಿಂ ನಿಯಚ್ಛತಿ ।
ಶಾಸ ಇತ್ಥಾ ಸಪತ್ನಘ್ನಂ ಸಂಗ್ರಾಮಂ ವಿಜಿಗೀಷತಃ ॥೭೬॥

ಪ್ರಯೋಕ್ತವ್ಯಂ ತು ಶುಚಿನಾ ಜುಹುಯಾತ್ತತ್ರ ಸಿದ್ಧಯೇ ।
ಅಥವಾ ಜಪ್ಯಮೇವ ಸ್ಯಾತ್ಸಂಗ್ರಾಮಮಭಿಗಚ್ಛತಃ ॥೭೭॥

ಶಾಸ ಇತ್ಥೇತಿ ಯೋ ಹಂತುಂ ಶತ್ರೂನ್ ಸರ್ವಾನ್ನಿವಾರಯೇತ್ ।
ಅಲಕ್ಷ್ಮೀ ನಾಶನಾರ್ಥಂ ತು ಜಪೇನ್ನಿತ್ಯಂ ಶಿರಿಂ ಬಿರಮ್ ॥೭೮॥

ಅಪಮಾರ್ಗಮಯೀಂ ಶಾಖಾಂ ಸದರ್ಭಾಂ ಸಹವೀರಣಾಮ್ ।
ಗೃಹೀತ್ವಾಽಽತ್ಮಾನಂ ಪಾವಯೇದದಶ್ಚೋರ್ಧ್ವಂ ಚ ನಿತ್ಯಶಃ ॥೭೯॥

ಅಜ್ಯಂ ಚಾನೇನ ಜುಹುಯಾತ್ಸಹಸ್ರಂ ದಶತೀರ್ದಶ ।
ತ್ರ್ಯಹೇಣ ನುದತೇ ದೇಹಾದಲಕ್ಷ್ಮೀಂ ಶತವಾರ್ಷಿಕೀಮ್ ॥೮೦॥

ಚಾಂದ್ರಾಯಣಂ ಚರನ್ನೇತತ್ಸೂಕ್ತಂ ಸಿದ್ಧಿಕರಂ ಜಪೇತ್ ।
ಅಲಕ್ಷ್ಮೀಂ ನುದತೇ ದೇಹಾದಪಿ ವರ್ಷ ಸಹಸ್ರಿಕೀಮ್ ॥೮೦॥

ಗೃಹೀತಂ ಯಕ್ಷ್ಮಣಾ ದರ್ಭಾನ್ ಗೃಹೀತ್ವಾ ಸಂಸ್ಪೃಶನ್ ಜಪೇತ್ ।
ಮುಂಚಾಮಿ ತ್ವಾ ಹವಿಷೇತಿ ಯಕ್ಷ್ಮಾಣಮಪಕರ್ಷತಿ ॥೮೨॥

ಸಮಿದ್ಧಮಗ್ನಿಂ ಜುಹುಯಾದಾಜ್ಯೇನೈವ ಯಥಾವಿಧಿಃ ।
ಸಂಪಾತಮಾಜ್ಯೇ ನಿನಯೇತ್ಸಂಪಾತೈಶ್ಚ ಪಯಃ ಪಿಬೇತ್ ॥೮೩॥

ಸಂಪಾತ ಭಾಜನೇ ಸರ್ಪಿಶ್ಚೂರ್ಣಂ ತತ್ರ ನಿಧಾಪಯೇತ್ ।
ತತ್ರಾಸ್ಯ ಭೋಜನೀಯಂ ಸ್ಯಾತ್ಸಾನೀಯಂ ಚಾನುಮಂತ್ರಿತಮ್ ॥

ಖಾದಿರಾಣಿ ತು ಕಾಷ್ಠಾನಿ ಚೂರ್ಣಂ ಕೃತ್ವಾ ಸಹಾಂಬುಭಿಃ ।
ಸಾಧಯೀತ ರಸಂ ಚೈಷಾಂ ಮಧ್ವಾಜ್ಯಾಭ್ಯಾಂ ಪಿಬೇತ್ಸಹ ॥೮೫॥

ಮುಂಚಾಮಿ ತ್ವಾ ಹವಿಷೇತಿ ತತ್ರ ತತ್ರ ಪ್ರಯೋಜಯೇತ್ ।
ಯಕ್ಷ್ಮಾಣ ಪಪಕರ್ಷತಿ ಶರೀರಾತ್ತೇನ ಕರ್ಮಣಾ ॥೮೬॥

ಯಸ್ಯಾಃ ಗರ್ಭಃ ಪ್ರಮೀಯೇತ್ ತತ್ರಾಗ್ನೌ ಜುಹುಯಾದ್ಧವಿಃ ।
ಬ್ರಹ್ಮಣಾಗ್ನಿಃ ಸಂ ವಿದಾನ ಇತ್ಯಾಜ್ಯೇನ ಯಥಾವಿಧಿ ॥೮೭॥

ಆಜ್ಯ ಶೇಷ್ಯೇಣ ಚಾಭ್ಯಜ್ಯ ಗರ್ಭಿಣೀ ಪ್ರಸನೇತ್ತತಃ ।
ಪಿಬೇದೇವಾಜ್ಯ ಶೇಷಂ ತು ಜೀವಂಸ್ತಸ್ಯಾಃ ಪ್ರಜಾಯತೇ ॥೮೮॥

ಜಾತಾನಿ ಚೇತ್ಪ್ರಮೀಯೇರನ್ನಾಜ್ಯಂ ಕೃತ್ವಾನುಮಂತ್ರಿತಮ್ ।
ಬ್ರಹ್ಮಣಾಗ್ನಿರಿತಿ ಹುತ್ವಾ ಸಂಪಾತಾನ್ನಿನಯೇದ್ ಮಣೌ ॥೮೯॥

ಮಣಿಂ ತು ತ್ರಿವೃತಿ ಸೂತ್ರೇ ವಾಸಯೇದ್ವಾಸಸಾ ಸಹ ।
ನ್ಯಗ್ರೋಧ ಶುಂಗಯಾ ತತ್ರ ಶುಕ್ಲಲೋಹಿತವೇಷ್ಟಿತಮ್ ॥೯೦॥

ತಂ ಸಾವಿತ್ರ್ಯಾಯುತೇನಾಥ ಅನುಮಂತ್ರ್ಯ ಯಥಾ ವಿಧಿ ।
ಸಂಪಾತೈರಯುತೇ ನೈವ ಬ್ರಹ್ಮಣೇ ತಿ ಚ ಸಂಸ್ತುತಮ್ ॥೯೧॥

ಉಪರಿಷ್ಟಾಚ್ಚ ಸಾವಿತ್ರ್ಯಾ ತಾವದೇವಾನು ಮಂತ್ರಣಮ್ ।
ಸರ್ವೈಃ ಸ್ವಸ್ತ್ಯಯನೈಶ್ಚೈತಜ್ಜಪೇದಭಿಹುತಂ ಮಣಿಮ್ ॥೯೨॥

ಶಿರಸಾ ಧಾರಯೇನ್ನಾರೀ ಪ್ರಯತಾ ಗರ್ಭಿಣೀ ಸತೀ ।
ತೃತೀಯೇ ಗರ್ಭಮಾಸೇ ತು ಮಣಿಮೇತಂ ಸಮಾಸಜೇತ್ ॥೯೩॥

ಪುಷ್ಯಂತೀ ಶರದಂ ನಾರೀ ಗೌಃ ಸವತ್ಸಾ ವಸೇದ್ ಯಥಾ ।
ಬಹುಪಾಣೀಯಯವಸಾ ವತ್ಸೇನ ಪಿಬತಾ ಸಹ ॥೯೪॥

ಜಾತಸ್ಯ ತು ಕುಮಾರಸ್ಯ ಕಂಠೇ ತಂ ಮಣಿಮಾಸಜೇತ್ ।
ಆಜ್ಯಶೇಷಂ ಪುರಸ್ಕೃತ್ಯ ತಮಭ್ಯಜ್ಯ ಕುಮಾರಕಮ್ ॥೯೫॥

ಹುತ್ವಾ ಸ್ವಸ್ತ್ಯಯು ನೈರೇವ ಸ್ತ್ರೀ ಪುಮಾಂಸಂ ಪ್ರಸೂಯತೇ ।
ಊರ್ಧ್ವಂ ವರ್ಷಾತ್ ಸ್ವಸ್ತ್ಯಯನಂ ಪುನರೇವ ವಿಧೀಯತೇ ॥೯೬॥

ಪುರಾ ಸ್ತನ ಪ್ರದಾನಾತ್ತಂ ಶ್ರದ್ಧಾ ಸೂಕ್ತೇನ ಪಾಯಯೇತ್ ।
ಮೇಧಾ ಸೂಕ್ತೇನ ಚೈವೇನಂ ಪಿಷ್ಟಂ ವ್ರೀಹಿಮಯಂ ಚರುಮ್ ॥

ಮಧುಮಿಶ್ರಂ ಜಾತರೂಪಂ ಮೇಧಾವೀ ತೇನ ಜಾಯತೇ ।
ಶತಂ ವರ್ಷಾಣಿ ಜೀವೇತ ಮ್ರಿಯತೇ ನ ಪುರಾಯುಷಃ ॥೯೮॥

ಘೃತ ಮೇವ ಚ ತಸ್ಯ ಸ್ಯಾತ್ ಷಣ್ಮಾಸಾಚ್ಚ ತತಃ ಪರಮ್ ।
ಆಜ್ಯಂ ಸಂಸ್ಕೃತ್ಯ ಜುಹುಯಾದಕ್ಷೀಭ್ಯಾಂ ತ ಇತಿ ದ್ವಿಜಃ ॥೯೯॥

ಪಾಣಿನಾ ತು ಘೃತಾಕ್ತೇನ ಮೂರ್ಧಾನಂ ಸಂಸ್ಪೃಶೇತ್ತತಃ ।
ಕರ್ಣೌ ನೇತ್ರೇ ಚ ಛುಬುಕಂ ನಾಸಿಕೇ ಚೈವ ಸಂಸ್ಪೃಶೇತ್ ॥೧೦೦

ಏತದೇವ ಜಪೇನ್ನಿತ್ಯಂ ಯಕ್ಷ್ಮಣೋ ವಿಪ್ರಮುಚ್ಯತೇ ।
ಪೂರ್ವೋಕ್ತೇ ನೈವ ಕಲ್ಪೇನ ಯಕ್ಷ್ಮನಾಶನಮಾಚರೇತ್ ॥೧೦೧॥

ಹೋಮೇನ ಚ ಜಪೈಶ್ಚೈವ ಯಕ್ಷ್ಮನಾಶ ಸಮಾಚರೇತ್ ।
ಅಪೇಹೀತಿ ಜಪೇತ್ಸೂಕ್ತಂ ಶುಚಿರ್ದುಃಸ್ವಪ್ನ ನಾಶನಮ್ ॥೧೦೨॥

ದೇವಾ ಕಪೋತ ಇತಿ ತು ಕಪೋತಸ್ಯೋಪವೇಶನೇ ।
ಸೂಕ್ತೇನ ಜುಹುಯಾದಾಜ್ಯಂ ಯಮದೂತಂ ಹಿತಂ ವಿದುಃ ॥

ಸಪತ್ನಘ್ನಂ ಪ್ರಯುಂಜೀತ ಋಷಭಂ ಜಪಹೋಮಯೋಃ ।
'ಯೋನೇ (ತುಭ್ಯೇ) ದಮಿತಿ ವೈ ನಿತ್ಯಂ ಜಪೇತ ನಿಯತ ವ್ರತಃ ॥

ಸಮಾಧಿಂ ಮನಸಸ್ತೇನ ವಿಂದತೇ ನೈವ ಮುಹ್ಯತಿ ।
ಮಯೋಭೂರ್ವಾತ ಇತಿ ತುಗವಾಂ ಸ್ವಸ್ತ್ಯಯನೇ ಜಪೇತ॥೧೦೩

ಯವಾಂ ಶ್ಚೈವ ಘೃತಾಭ್ಯಕ್ತಾನ್ ಕಾರೀಷೇಗ್ನೌ ಸಮಾಹಿತಃ ।
ಜುಹುಯಾದ್ಗೋಷ್ಠಮಧ್ಯೇ ತು ದಧಿ ಮಧ್ವಾಜ್ಯ ಸಂಸ್ಕೃತಾನ್ ॥

ರಾಜಾನಮಭಿಷಿಂಚೇತ್ ತಿಷ್ಯೇಣ ಶ್ರವಣೇನ ವಾ ।
ಪೌಷ್ಣಾ ಸಾವಿತ್ರ ಸೌಮ್ಯಾಶ್ವಿರೋಹಣೀಷೂತ್ತರಾಸು ಚ ॥೧೦೪॥

ಹುತ್ವಾಗ್ನಿಂ ರಾಜಲಿಂಗಾಭಿಃ ಸಾವಿತ್ರ್ಯಾ ಪ್ರಯತಃ ಶುಚಿಃ ।
ಮಹಾ ವ್ಯಾಹೃತಿಭಿಶ್ಚೈವ ಸಂಪಾತಾಭಿಹುತೋ ಭವೇತ್ ।೧೦೮

ಸರ್ವೌಷಧಿರಸೈಃ ಶ್ಲಕ್ಷ್ಣೈರ್ನದೀನಾಂ ಸಲಿಲೇನ ಚ ।
ವ್ಯಾಘ್ರಚರ್ಮಣ್ಯ ಥಾಸೀನ ಮಾ ಸಂಧ್ಯಾಮಭಿಷಿಚ್ಯತಮ್ ॥೧೦೯

ತ್ರಿಷ್ಟಸ್ತ್ರ್ಯಜ್‌ಮುಖೋ ಬ್ರೂಯಾಜ್ಜಯ ತ್ವಂ
ಪೃಥಿವೀಮಿಮಾಮ್ ।
ಧರ್ಮಸ್ತೇ ನಿಖಿಲೋ ರಾಜನ್ ವರ್ಧತಾಂ ಪಾಲಯ ಪ್ರಜಾಃ ॥

ವರ್ಧಸ್ವ ತ್ವಂ ಶ್ರಿಯೈ ಪುಷ್ಟ್ಯೈ ಜಯಾಯಾಭ್ಯುದಯಾಯಚ ।
ರಾಜಾನಃ ಸಂತು ತೇ ಗೋತ್ರೇ ತತೋಽಪ್ರತಿರಥಂ ಜಪೇತ್॥೧೧೧॥

ವೈಯಾಘ್ರಂ ತು ಭವೇಚ್ಚರ್ಮ ಸಮಿದೌದುಂಬರೀ ಭವೇತ್ ।
ತ್ರೀರೇನಮಭಿಷಿಂಚ್ಯೈನಂ ದುಂದುಭೀನಮಭಿಮಂತ್ರಯೇತ್॥೧೧೨

ಪ್ರಾಚ್ಯಾಂ ತ್ವಾ ದಿಶಿ ವಸವೋ ಅಭಿಷಿಂಚಂತು ತೇಜಸೇ ।
ದಕ್ಷಿಣಸ್ಯಾಂ ತ್ವಾ ದಿಶಿ ರುದ್ರಾ ಅಭಿಷಿಂಚಂತು ವೃದ್ಧಯೇ॥೧೧೩॥

ಪ್ರತೀಚ್ಯಾಂ ತ್ವಾ ದಿಶ್ಯಾದಿತ್ಯಾ ಅಭಿಷಿಂಚಂತು ಪುಷ್ಟಯೇ ।
ವಿಶ್ವೇ ದೇವಾ ಉದೀಚ್ಯಾಂ ತು ಅಭಿಷಿಂಚಂತು ಶ್ರೇಯಸೇ ॥೧೧೪

ಅಭಿಷಿಚ್ಯ ಚ ರಾಜಾ ನ ಮಾಶೀರ್ಭಿನಂದ್ಯಚ ।
ಆ ತ್ವಾ ಹಾರ್ಷಮಂತರೇಧೀತ್ಯ ಧ್ಯೈ ನಮಭಿಮಂತ್ರಯೇತ್ ॥೧೧೫

ಪತಂಗಮಿತಿ ನಿತ್ಯಂ ತು ಜಪೇದಜ್ಞಾನಭೇದನಮ್
ಮಾಯಾಭೇದನಮೇತದ್ಧಿ ಸರ್ವಮಾಯಾ ಪ್ರಬಾಧತೇ ॥೧೧೬॥

[illegible]

ಅದೃಷ್ಟಾನಾಂ ಚ ಸತ್ತ್ವಾನಾಂ ಮಾಯಾಮೇತೇನ ಬಾಧತೇ ||

ತ್ರೈಮಾಶ್ಕಿತಿ ಸ್ವಸ್ತ್ಯಯನಂ ಜಪೇತ್ ನಿಯತ ವ್ರತಃ |
ಪುಷ್ಪಂ ದೃಷ್ಟ್ವಾ ತು ಯಾ ಗರ್ಭಂ ನ ಗೃಹ್ಣೀಯಾದ್
ಪಯೋಽನ್ವಿತಾ ||೧೧೮||

ವಿಷ್ಣುರ್ಯೋನಿಂ ನೇಜಮೇಷ ಯೋನಿಂ ಸ್ಪೃಷ್ಟ್ವಾ
ತತೋ ಜಪೇತ್ |
ಮಹಿ ತ್ರೀಣಾಮವೋಽಸ್ತ್ವಿತಿ ಪಥಿ ಸ್ವಸ್ತ್ಯಯನೇ ಜಪೇತ್ ||

ಪ್ರಾಗ್ನ ಯೇಽಥ ದ್ವಿಷದ್ ದ್ವೇಷ್ಯಂ ಜಪೇದ್
ದ್ವೇಷಸ್ಯ ನಿಷ್ಕೃತಿಮ್ |
ಅಯಂ ಗೌಃ ಸಾರ್ಪರಾಜ್ಞ್ಯಾಸ್ತು ಸರ್ಪಾನೇತೇನ ಬಾಧತೇ ||೧೨೦

ಪವಿತ್ರಾಣಾಂ ಪವಿತ್ರಂ ತು ಜಪೇದೇವಾಘಮರ್ಷಣಮ್ |
ಆಪಃ ಪ್ರವಿಶ್ಯ ಯಚ್ಚೈತತ್ ತ್ರಿಃ ಪಠೇತ್ ಸುಸಮಾಹಿತಃ ||೧೨೧||

ಯಥಾಶ್ವಮೇಧಾವಭೃಥಸ್ತಾದೃಶಂ ಮನುರಬ್ರವೀತ್ |
ಅಪ್ಸು ಚೈವ ನಿಮಜ್ಜಿತ್ವಾ ತ್ರಿಃ ಪಠೇದಘಮರ್ಷಣಮ್ ||೧೨೨||

ಯಥಾಶ್ವಮೇಧಾವಭೃಥ ಏವಂ ತ ದೃಷಿರಬ್ರವೀತ್ |
ಯಥಾಶ್ವಮೇಧಃ ಕ್ರತುರಾಟ್ ಸರ್ವ ಪಾಪಾಪನೋದನಃ ||೧೨೩||

ತಥಾಘಮರ್ಷಣಂ ಸೂಕ್ತಂ ಸರ್ವ ಪಾಪಪನೋದನಮ್ |
ಸೇನಾದಾರಣ ಮೇತತ್ಸ್ಯಾನ್ನೈರ್ಹಸ್ತ್ಯಮಿತಿ ಶೌನಕಃ ||೧೨೪||

ಮನಸಾ ಧ್ಯೇಯಮೇತತ್ತು ಮನ್ಯತೇ ಶೌನಕಸ್ತ್ವೃಷಿಃ ।
ಸಂ ಸಮಿದ್ ಯುವಸೇ ವೃಷನ್ ಸೌಭ್ರಾತ್ರ್ಯಕರಣಂ ಮಹತ್ ॥

ಜ್ಞಾತಿ ಭೇಧೇ ಪ್ರಯುಂಜೀತ ನ ಭಿದ್ಯಂತೇ ಕದಾಚನ ।
ಕೃತೇ ಭೇದೆ ತು ಸಂಜ್ಞಾನ ಮೇತತ್ಸಂಧಿಕರಂ ಜಪೇತ್ ॥೧೨೬॥

ನ ತತ್ರ ಭೇದೋ ಭೂಯಃ ಸ್ಯಾದ್ ಯತ್ರೈತತ್ಸತತಂ ಜಪೇತ್ ।
ತಚ್ಛಂ ಯೋರಾವೃಣೀಮಹ ಇತಿ ಸ್ವಸ್ತ್ಯಯನಂ ಜಪೇತ್ ॥೧೨೭

ಮಹಾನಾಮ್ನ್ಯಃ ಪರಂ ಬ್ರಹ್ಮ ಶುಕ್ರಂ ಜ್ಯೋತಿಃ ಸನಾತನಮ್ ।
ಸಪತ್ನಘ್ನಶ್ಚ ಪುಣ್ಯಾಶ್ಚ ಪಾವಮಾನ್ಯಃ ಪರಾಃ ಸ್ಮೃತಾ ॥೧೨೮॥

ವೃಷ್ಟಿಕಾಮೋ ಜಪೇಚ್ಛೈತಾ ಆಪೋಹಿಷ್ಠಾಃ ಸನಾತನಾಃ ।
ಓಂಕಾರ ಪೂರ್ವಾ ವ್ಯಾಹೃತಯೋ ಮಧುಛಂದ ಸ ಆದಿತಃ ॥

ಸೂಕ್ತಾನ್ಯನ್ತೇ ಮಹಾ ನಾಮ್ನ್ಯಃ ಸಂಹಿತಾ ಸಾಮೃತಾ ಸ್ಮೃತಾ ।
ಅಮೃತತ್ವಂ ಯಯುರ್ದೇವಾಃ ಪೂರ್ವಂ ಸಂಹಿತಯಾನಯಾ ॥

ಜಪನ್ನೇತಾಂ ಶುಚಿರ್ನಿತ್ಯಮಮೃತತ್ವಂ ಸ ಗಚ್ಛತಿ ।
ಅತ್ರೈವ ತ್ವಾವಪೇನ್ಮಧ್ಯೇ ಪಿತೃಸೂಕ್ತಾನ್ಯನೇಕಶಃ ॥೧೩೦॥

ಪಿತ್ರ್ಯಂ ತಾಂ ಸಂಹಿತಾಂ ವಿದ್ಯಾತ್ ಪಿತೄನ್
ಪ್ರೀಣಾತಿ ಚೈತಯಾ ।
ಏವ ಮೇವ ಸಮಾಹೃತ್ಯ ವಾಸವೀ ಸಂಹಿತಾ ಭವೇತ್ ॥೧೩೨॥

ರೌದ್ರಾದಿತ್ಯ ವೈಶ್ವದೇವೀ ಯದ್ದೇವತ್ಯಾಂ ಚ ಕಾಮಯೇತ್ ।
ಕುರ್ವೀತ ವಾಸು ಶಮನಂ ಮಧ್ಯೇ ಗೋಷ್ಠಸ್ಯ ಧರ್ಮವಿತ್ ॥೧೩೩

ಪುಷ್ಪೈರ್ಗಂಧೈಶ್ಚ ಮಾಲ್ಯೈಶ್ಚ ವಾಸಸ್ಪತ್ಯೈಸ್ತಥೌಷಧೈಃ ।
ವಾಸ್ತು ಸರ್ವಂ ಪ್ರತಿಕಿರೇತ್ಸಪ್ತ ಧಾನ್ಯೈಸ್ತಥೈವ ಚ ॥೧೩೪॥

ವಾಸ್ತೋಷ್ಪತಿಂ ಯಜೇಚ್ಚಾತ್ರ ಪಾಯಸೇನ ಬೃಹಸ್ಪತಿಮ್ ।
ಔದುಂಬರ ಪಾಲಾಶೈಸ್ತು ಬಲಿಂ ಪ್ರತಿದಿಶಂ ಹರೇತ್ ॥೧೩೫॥

ಸೂರ್ಯೋಽಗ್ನಿ ವಾಯುರ್ಯಮಃ ಪಿತರೋ ವರುಣೋ
ನಿಋತಿಸ್ತಥಾ ।
ಸೋಮೋ ಮಹೇಂದ್ರ ಇತ್ಯೇತೇ ದಿಕ್ಷು ವೈ ದೇವತಾಃ ಸ್ಮೃತಾಃ ॥

ದದ್ಯಾದ್ ದಾನಂ ಬ್ರಾಹ್ಮಣೇಭ್ಯಃ ಶಿವಂ ಭವತಿ ವಾಸ್ತುನಿ ।
ಪ್ರತಿ ಸಂವತ್ಸರಂ ಕಾರ್ಯಂ ಗೃಹೇ ವೈ ಗೃಹಮೇಧಿನಾ ॥೧೩೭॥

ಯಥ್ಯೇವಂ ಸವಿಧಂ ಚಾನ್ಯದನುಕ್ತಮಪಿ ಕಿಂಚನ ।
ಅಗ್ನಿಮಿಂದ್ರಮಥೋ ವಾಯುಂ ಸೂರ್ಯಮನ್ಯಾಶ್ಚ ದೇವತಾ ॥

ಆರಿರಾಧಯಿಷುರ್ಯಾಂ ಯಾಮಭಿಧಾವೇತ ತಾಂ ಚ ತಾಮ್ ।
ಅಭಿರೂಪೇಣ ಸೂಕ್ತೇನ ಯಥಾದಿಷ್ಟಂ ಪ್ರಯೋಜನಮ್ ॥

ಋಷೀಣಾಂ ಮಂತ್ರದೃಷ್ಟೇನ ಪ್ರತ್ಯಕ್ಷಾ ಸಿದ್ಧಿರಿಷ್ಯತೇ ।
ಸರ್ವತ್ರ ದಕ್ಷಿಣಾಂ ದದ್ಯಾದ್ ಧನಂ ವಾ ಧರ್ಮಸಿದ್ಧಯೇ ॥೧೪೦

ನ ತ್ವೇವಾ ದಕ್ಷಿಣಾಂ ಕರ್ಮ ಕಿಂಚಿದಸ್ತೀತಿ ಶೌನಕಃ ।
ಶಕ್ತ್ಯಾ ಹಿ ಪೂರ್ಣಪಾತ್ರೇಣ ಸಮ್ಮಿತಾಪ್ಯಂತತೋ ಭವೇತ್॥೧೪೧

ತಸ್ಮಾತ್ ಸ್ವಲ್ಪಾಪಿ ದಾತವ್ಯಾ ದಕ್ಷಿಣಾ ಕರ್ಮಸಿದ್ಧಯೇ
ಋಷಭೈಕಾದಶಾ ದದ್ಯಾತ್ ಯೇನವಾ ತುಷ್ಯತೇ ಗುರುಃ ॥೧೪೪॥

ಧರ್ಮಜ್ಞೇ ಸತ್ಯವಾದಿನಿ ಬ್ರಹ್ಮದಾನಂ ಚ ದೀಯತೇ |
ತದಿದಂ ಪರಮಂ ಬ್ರಹ್ಮ ಗುಹ್ಯಂ ಪಾವನಮದ್ಭುತಮ್ ॥೧೪೩॥

ನಾ ಪ್ರಶಾಂತಾಯ ದಾತವ್ಯಂ ನಾ ಪುತ್ರಾಯಾ ತಪಸ್ವಿನೇ !
ನಾ ಸಂವತ್ಸರೋಽಷಿತಾಯ ನಾ ಶಿಷ್ಯಾಯಾಹಿತಾಯ ಚ ॥೧೪೪॥

॥ ನಮಃ ಶೌನಕಾಯ ನಮಃ ಶೌನಕಾಯಃ ॥

ಇತ್ಯೃಗ್ವಿಧಾನೇ ಚತುರ್ಥೋಽಧ್ಯಾಯಃ.

ನಾಲ್ಕನೆ ಅಧ್ಯಾಯದ ಸಾರಾಂಶ

ಶೌನಕರು ಜಗದ್ವ್ಯಾಪಿಯಾದ ವಿಷ್ಣುವಿನ ಉಪಾಸಕರಾಗಿದ್ದು ಭಕ್ತಿಯ ಮಹಿಮೆಯನ್ನು ವಿವರಿಸಿದ್ದಾರೆ. ಸಕಲ ಜಗತ್ತಿಗೂ ಸಾಕ್ಷಿಯಾದ ಮತ್ತು ಚತುರ್ವಿಧ ಪುರುಷಾರ್ಥವನ್ನು ಕೊಡುವ ಸೃಷ್ಟಿಲಯಗಳಿಗೆ ಕಾರಣನಾದ ಈ ದೇವನು ಸರ್ವೋತ್ತಮನೆಂದು ಸಾರಿದ್ದಾರೆ. ಇವನು ಸ್ತುತಿ ನಮಸ್ಕಾರಗಳಿಂದ ಪ್ರೀತನಾಗುತ್ತಾನೆ. ಶರತ್ಕಾಲದಲ್ಲಿ ರುದ್ರನನ್ನು ಔಷಧಿಗಳನ್ನು ಕುರಿತು ಯಾಗ ಮಾಡಿದರೆ ಎಲ್ಲಾ ವ್ಯಾಧಿಗಳು ನಾಶಿಯಾಗುತ್ತವೆ. "ದ್ವಿಶತ ಕ್ಷತ್ರಾದಿ ಅರ್ಧ್ಯಂ" ಎಂಬ ಸೂಕ್ತದಿಂದ ಏಳು ರಾತ್ರಿ ಜಪಿಸಿದರೆ ವೈದ್ಯನು ತನಗೆ ಚಿಕಿತ್ಸೆಗೆ ಅರ್ಹವಾದ ಔಷಧಿಗಳನ್ನು ಹೊಂದುತ್ತಾನೆ. ವೃಷ್ಟಿ ಕಾಮನೆಯುಳ್ಳವನು ಬೃಹಸ್ಪತಿಯನ್ನು ಸ್ತುತಿಸಿದರೆ ಮತ್ತು ಪಾಯಸದಿಂದ ಹೋಮಮಾಡಿದರೆ ವೃಷ್ಟಿ ಪ್ರಾಪ್ತಿಯಾಗುತ್ತದೆ. ಮತ್ತು ಕ್ಷತ್ರಿಯನಾದವನು ಅಪ್ರತಿಮ ಸಾಮರ್ಥ್ಯವುಳ್ಳವನಾಗಿ ಶತ್ರುಗಳನ್ನು ಜಯಿಸಬೇಕೆಂದು ಯಾವ ದೇಶಕ್ಕೆ ಹೋಗುತ್ತಾನೋ ಅವನು ಜಯವನ್ನು ಹೊಂದಿ ಹಿಂದಿರುಗುತ್ತಾನೆ. ಅವನು ಬ್ರಹ್ಮನ ಬಲವನ್ನು ಹೊಂದುತ್ತಾನೆ. ಭೂತಾಂಶ ಋಷಿಯ ಸೂಕ್ತದ ಜಪದಿಂದ ಅನುರೂಪವಾದ ಸಂತತಿಯನ್ನು ಹೊಂದುತ್ತಾನೆ. ಈ ಭೂತೇಷು ಸೂಕ್ತದ ಹೋಮದಿಂದ ಸೂರ್ಯನು ಉದಯಿಸಿರುವಾಗ ಅಶ್ವಿನೀ ದೇವತೆಗಳನ್ನು ಕುರಿತು ಯಾಗಮಾಡಿದರೆ ಧೀರ್ಘಾಯುಸ್ಸು ಮತ್ತು ಸಕಲ ಫಲ ಪ್ರಾಪ್ತಿಯಾಗು. ಒಳ್ಳೆಯ ರೂಪ, ಅನ್ನ ಪ್ರಾಪ್ತಿ ಮತ್ತು ಸಕಲ ಪಾಪ ವಿಮೋಚನೆಯಾಗುತ್ತದೆ. "ಅಹಂ ರುದ್ರೇಭಿಃ" ಎಂಬ ಸೂಕ್ತದಿಂದ ಉತ್ತಮ ವಾಗ್ಮಿಯಾಗುತ್ತಾನೆ. ರಾತ್ರಿ ಸೂಕ್ತದ ಜಪದಿಂದ ಸಂವತ್ಸರ ಕಾಲ ಸಾವಿರ ಸಂಖ್ಯೆಯಲ್ಲಿ ಹೋಮ ಮಾಡಿದರೆ ಸಾಕ್ಷಾತ್ಕಾರ ಉಂಟಾಗುತ್ತದೆ. ರಾತ್ರಿ ಸೂಕ್ತದ ಜಪದಿಂದ ಒಳ್ಳೆಯ ಕಾಲವನ್ನು ಹೊಂದಿ ತಿರುಗಿ ಜನ್ಮವನ್ನು ಪಡೆಯುವುದಿಲ್ಲ. ಈ ರೀತಿ "ಮಮಾಗ್ನೆ, ಯಾಂ ಕಲ್ಪಯಂತಿ ಮತ್ತು ಯಮಂಗಿರಸ ಋಕ್ಕು" ಇವುಗಳನ್ನು ಪಠಿಸಿದರೆ ಅಭಿಚಾರ ಭಾದೆಯನ್ನು ಹೋಗಲಾಡಿಸುತ್ತದೆ. ಇಮಂ ಋಷಿಃ ಇಂದ ಸ್ವರ್ಣಮಯವಾದ ಮಣಿಯನ್ನು

ಸೇರಿಸಿ ತಲೆಯಲ್ಲಾಗಲೀ, ಕುತ್ತಿಗೆಯಲ್ಲಾಗಲೀ ಧರಿಸಿದರೆ ಕ್ಷತ್ರಿಯರಿಗೆ ಶತ್ರುಮರಣ ಮತ್ತು ಜಯ ಪ್ರಾಪ್ತಿಯಾಗುತ್ತದೆ. ಅಭಿಚಾರಾದಿ ಕೃತ್ಯಗಳು ಇವನಿಗೆ ತಾಕುವುದಿಲ್ಲ. ಇದು ಕೃತ್ಯಾ ಸೂಕ್ತದ ಮಹಿಮೆ. ದಾಕ್ಷಾಯಿಣಿ ಸೂಕ್ತ ಜಪಿಸಿದರೆ ಶಾಂತಾತ್ಮನಾಗಿ ಹಿರಣ್ಯವನ್ನು ಐಶ್ವರ್ಯವನ್ನು ಹೊಂದುತ್ತಾನೆ. ಮತ್ತು ಅವನು ಅಲಂಕಾರದಿಂದ ವಿಯುಕ್ತನಾಗುವುದಿಲ್ಲ. ಭಾವವೃತ್ತಿ ಸೂಕ್ತದಿಂದ ಸರ್ವಕಾಮ ಪ್ರಾಪ್ತಿಯುಂಟಾಗುತ್ತದೆ. ನಾಸದಾಸೀ ಎಂಬ ಸೂಕ್ತದಿಂದ ಯೋಗಿಯಾದವನು ಹನ್ನೆರಡು ವರ್ಷಗಳಲ್ಲಿ ಬ್ರಹ್ಮಸಾಯುಜ್ಯವನ್ನು ಹೊಂದುತ್ತಾನೆ. ಉತದೇವ ಎಂಬ ಸೂಕ್ತದಿಂದ ಘೃತ ಕುಂಭವನ್ನು ಇಟ್ಟು ಅಗ್ನಿಯಲ್ಲಿ ಹೋಮ ಮಾಡಿದರೆ ಅವನಿಗೆ ಬಹ್ವನ್ನ ಪ್ರಾಪ್ತಿಯಾಗುತ್ತದೆ. ಇಮಾಂ ಎಂಬ ಸೂಕ್ತವನ್ನು ನೂರು ಸಲ ಜಪಿಸಿದರೆ ಸ್ತ್ರೀಯಾದವಳಿಗೆ ಸವತಿಯ ಕಾಟವು ಇರುವುದಿಲ್ಲ ಮತ್ತು ಅವಳು ಏಳು ರಾತ್ರಿ ಅದರ ಅಭಿಮಂತ್ರಣದ ಹಾಲನ್ನು ಕುಡಿದರೆ ಪತಿಯನ್ನು ಸ್ವಾಧೀನದಲ್ಲಿ ಇಟ್ಟುಕೊಳ್ಳಬಹುದು. ಮತ್ತು ಪ್ರಿಯವಾಕ್‌ವುಳ್ಳವಳಾಗಿ ದಿವ್ಯರೂಪದಿಂದ ಯುಕ್ತಳಾಗಿ, ಪತಿಯನ್ನು ಆನಂದ ಪಡಿಸುತ್ತಾಳೆ. ಆದುದರಿಂದ ಮನುಷ್ಯನಾದವನು ಸ್ತ್ರೀಯನ್ನು ಅವಮಾನಗೊಳಿಸಬಾರದು. ಹಾಗೆ ಮಾಡಿದರೆ ಪಾಪವುಂಟಾಗುವುದು. ಶ್ರದ್ಧಾ ಸೂಕ್ತದಿಂದ ಶ್ರದ್ಧೆಯನ್ನು ಮೇಧಾ ಸೂಕ್ತದಿಂದ ಮೇಧೆಯನ್ನು ಹೊಂದುತ್ತಾನೆ. ಬ್ರಾಹ್ಮೀ ಸೂಕ್ತ ಜಪ ಮತ್ತು ಪಾನಮಾಡಿದರೆ ಸಕಲವೂ ಸಿದ್ಧಿಯಾಗುತ್ತದೆ. ಮುಂಚಾಮಿತ್ವಾ ಎಂಬ ಸೂಕ್ತದಿಂದ ಹೋಮ ಮಾಡಿದರೆ ಕ್ಷಯರೋಗವನ್ನು ನೀಗಿಕೊಳ್ಳಬಹುದು. ಬ್ರಹ್ಮಣಾಗ್ನಿ ಸಹ ಎಂಬ ಸೂಕ್ತದಿಂದ ಹೋಮ ಮಾಡಿದರೆ ಗರ್ಭಸ್ರಾವವು ನಿಂತು, ಅವಳು ಮಕ್ಕಳನ್ನು ಹೊಂದುವಳು ತಚ್ಚಂಯೋ ಎಂಬ ಸೂಕ್ತದಿಂದ ಜಪ ಮತ್ತು ಹೋಮಾದಿಗಳು ಮಾಡಿದರೆ ಸರ್ವಸಿದ್ಧಿಯುಂಟಾಗುತ್ತದೆ ಅದಲ್ಲದೆ, ರುದ್ರ ಆದಿತ್ಯ ವೈಶ್ವೆದೇವ ಮೊದಲಾದ ದೇವತೆಗಳ ಅನುಗ್ರಹವು ಇಷ್ಟಾರ್ಥಕ್ಕೆ ಅನುಸಾರವಾಗಿ ಲಭಿಸುತ್ತದೆ. ಹಾಗೆಯೇ ಯಮ, ಸೂರ್ಯ, ವಾಯು ಪಿತೃಗಳೂ ವರುಣ ಇವರುಗಳು ಪ್ರಸನ್ನರಾಗುವರು ಮಂತ್ರದೃಷ್ಟಾರರಾದ ಋಷಿಗಳ ಮಾತುಗಳು ಈ ರೀತಿ ಮಹಿಮೆಯಿಂದ ಕೂಡಿರುತ್ತದೆ.

ಪಂಚಮೋಽಧ್ಯಾಯಃ

ನರಾಣಾಂ ಭಾಗ್ಯ ಹೀನಾನಾಮೃಗ್ವಿಧಾನಮಜಾನತಾಮ್ ।
ಋಗ್ವೇದಃ ಕಲ್ಪವೃಕ್ಷೋಽಯಂ ಫಲಂ ನೈವ ಪ್ರಯಚ್ಛತಿ ॥೧॥

ರತ್ನಗರ್ಭ ಇವಾವಾಸ ಋಗ್ವೇದಃ ಪ್ರತಿಭಾತಿಮೇ ।
ಋಗ್ವಿಧಾನ ಪ್ರದೀಪೇನ ವಿನಾ ನೈವ ಪ್ರಕಾಶತೇ ॥೨॥

ರತ್ನಾಕರ ಇವೋದಾರ ಋಗ್ವೇದೋತ್ಯಂತದುಸ್ತರಃ ।
ಋಗ್ವಿಧಾನ ಮಹಾಪೋತಂ ವಿನಾ ನೈವ ಫಲಪ್ರದಃ ॥೩॥

ನಿಧಾನಂ ಸರ್ವರತ್ನಾನಾಂ ಋಗ್ವೇದೋ ಬ್ರಹ್ಮಮಂದಿರಮ್ ।
ಋಗ್ವಿಧಾನ ವಿಧಾನೇನ ಧ್ರುವ ಮೇತದವಾಪ್ಯತೇ ॥೪॥

ಋಗ್ವೇದಃ ಪಠಿತೋ ಹ್ಯೇಷ ನೃಣಾಂ ಭವತಿ ನಿಷ್ಫಲಃ ।
ಋಗ್ವಿಧಾನಂ ವಿನಾ ತಸ್ಮಾದಧ್ಯೇಯಂ ತತ್ಪ್ರಯತ್ನತಃ ॥೫॥

ಸೂಕ್ತ ತತ್ವಾರ್ಥ ಕಥನ ಮೃಗ್ವಿಧಾನಮ[illegible]ತಿ ಯಃ ।
ಋಗ್ವೇದೋ ಜಾಯತೇ ತಸ್ಯ ಪ್ರಸಾದಾತ್ಪಲ್ಲಮಾನಸಃ ॥೬॥

ಆಯುಷ್ಯಂ ಸಂಪದೋ ಮೂಲಂ ಸರ್ವ ಕಲ್ಮಷನಾಶನಮ್ ।
ಋಗ್ವಿಧಾನಾಭ್ಯನುಷ್ಠಾನಂ ಶುಭ್ರಕೀರ್ತಿಕರಂ ಪರಮ್ ॥೭॥

ಋಗ್ವಿಧಾನೇನ ಸಂಯುಕ್ತಮೃಗ್ವೇದಂ ವೇತ್ತಿ ಯೋ ದ್ವಿಜಃ ।
ಧರ್ಮಾರ್ಥಕಾಮಮೋಕ್ಷಾಣಾಮಾಶ್ರಯಃ ಸ
ಭವೇದ್ ದ್ರುವಮ್ ॥೮॥

ವೇದೇಷು ಪ್ರಥಮೋ ವೇದ ಆಯುರ್ವೇದ ನಿಧಿಃ ಪ್ರಭುಃ ।
ಋಗೀಧಾನ ಸದಾಭ್ಯಾಸಾದಶೀವ ಪರಿತುಷ್ಯತಿ ॥೯॥

ಶತ್ರುನಾಶಂ ಮನಸ್ತುಷ್ಟಿಂ ಸುಹೃಜ್ಜನ ಸಮಾಗಮಮ್ ।
ಋಗ್ವೇದೇಃ ಪ್ರಯಾನ್ತಾ ನಿತ್ಯಮೃಗ್ವಿಧಾನೇನ ತೋಷಿತಃ ॥೧೦॥

ಋಗ್ವೇದಂ ವೇತ್ತಿ ಯಃ ಸಾಂಗಮೃಗ್ವಿಧಾನರತಃ ಸದಾ ।
ಮನೋರಥಾದಪ್ಯಧಿಕಂ ಭವೇತ್ತಸ್ಯ ಸಮೀಹಿತಮ್ ॥೧೧॥

ಕುಲೇ ಜನ್ಮನಿ ಶೀಲೇ ವಾ ಪ್ರಜ್ಞಯಾ ಮುದ್ಯಮೇಽಪಿಚ ।
ಋಗ್ವಿಧಾನ ಪರಿಜ್ಞಾನಾದುಃಶಂತಿ ಚರಿತಾರ್ಥತಾಮ್ ॥೧೨॥

ತುಷ್ಯಂತಿ ದೇವತಾಃ ಸರ್ವಾಃ ಸಂಪದ್ಯಂತೇ ವಿಭೂತಯಃ ।
ದುರಾಧಯಃ ಪ್ರಣಶ್ಯನ್ತಿ ನಿತ್ಯ ಮೃಗ್ವಿಧಿ ಪಾಠಿನಾಮ್ ॥೧೩॥

ನಮಃ ಶೌನಕಾಯ ನಮಃ ಶೌನಕಾಯ

ಇತ್ಯೃಗ್ವಿಧಾನೇ ಪಂಚಮೋಽಧ್ಯಾಯಃ

ಋಗ್ವಿಧಾನಂ ಸಮಾಪ್ತಂ

ಐದನೇ ಅಧ್ಯಾಯದ ಸಾರಾಂಶ

ಇಲ್ಲಿ ಫಲಶ್ರುತಿಯನ್ನು ಹೇಳುತ್ತಾರೆ. ಋಗ್ವೇದ ಅಧ್ಯಯನ ಮಾಡದೆ ಇರುವವರಿಗೆ ಯಾವ ವಿಧವಾದ ಫಲಪ್ರಾಪ್ತಿಯಾಗುವುದಿಲ್ಲ. ಅವರು ಅದೃಷ್ಟಹೀನರು. ಇದು ರತ್ನದಿಂದ ತುಂಬಿಕೊಂಡಿರುವ ಮನೆಯಂತೆ. ಇದು ಅತ್ಯಂತ ದುಸ್ತರವಾಗಿದೆ. ಇದನ್ನು ದೋಣಿಯನ್ನಾಗಿ ಮಾಡಿಕೊಂಡು ದುಃಖಮಯವಾದ ಸಂಸಾರವನ್ನು ದಾಟಬಹುದು. ಈ ವಿಧಾನದಿಂದ ಅಧ್ಯಯನ ಮಾಡಬೇಕು. ಈ ಸೂಕ್ತಗಳ ತತ್ವಾರ್ಥವು ಈ ವಿಧಾನದಿಂದ ಲಭಿಸುತ್ತದೆ. ಈ ವಿಧಾನದಿಂದ ಋಗ್ವೇದವನ್ನು ಪೂರ್ತಿ ಅಧ್ಯಯನ ಮಾಡಿದವನು ಧರ್ಮ, ಕಾಮ, ಮೋಕ್ಷಗಳನ್ನು ಹೊಂದಬಹುದು. ಧನ್ವಂತರಿ ಆಯುರ್ವೇದಕ್ಕೂ ಇದು ಮೂಲವಾಗಿದೆ. ಶತ್ರುನಾಶ ಮನಸ್ಸಂತೋಷ, ಸ್ನೇಹಿತರ ಸಮಾಗಮ ಇವು ಪ್ರಾಪ್ತಿಯಾಗುತ್ತವೆ. ಈ ವಿಧಾನದಿಂದ ಅಧ್ಯಯನ ಮಾಡಿದರೆ ಸಕಲ ಮನೋರಥವು ಲಭಿಸುತ್ತದೆ. ಸಕಲ ದೇವತೆಗಳು ಪ್ರಸನ್ನರಾಗುತ್ತಾರೆ. ಐಶ್ವರ್ಯ ಪ್ರಾಪ್ತಿಯಾಗುತ್ತದೆ. ಮಾನಸಿಕವಾದ ಚಿಂತೆಗಳು ನಾಶವಾಗುತ್ತವೆ. ಈ ರೀತಿ ಈ ಗ್ರಂಥದ ಮೂಲಕ ಸರ್ವರಿಗೂ ಒಳ್ಳೆಯದಾಗಲೆಂಬ ಶುಭಕಾಮನೆಯಿಂದ ಮಹರ್ಷಿ ಶೌನಕರು ಪ್ರಚುರಪಡಿಸಿದ್ದಾರೆ. ಋಷಿಗಳು ಯಾವತ್ತೂ ಕೂಡ ಅತೀಂದ್ರಿಯ ವ್ಯಾಪಾರವನ್ನು ನಿಯಂತ್ರಿಸುತ್ತಾ ಎಲ್ಲಾರ ಕಲ್ಯಾಣಕೆ ಶ್ರಮಿಸಿದ್ದಾರೆ ಎಂಬುದಕ್ಕೆ ಈ ಗ್ರಂಥವೇ ಸಾಕ್ಷಿಯಾಗಿದೆ. ಇದು ಭಾರತೀಯ ಸಂಸ್ಕೃತಿಗೆ ಉತ್ತಮ ಪ್ರತೀಕವಾಗಿದೆ. ವಾಕ್ ನಾಲ್ಕು ವಿಧಾನಗಳುಂಟು ಪರಾಪಶ್ಯಂತೀ ವೈಖರೀ ಮಧ್ಯಮಾ ಎಂಬುದಾಗಿ ಮೊದಲನೆಯ ಮೂರು ಪ್ರಭೇದಗಳು. ಮೇಲುಲೋಕಗಳಲ್ಲಿ ಪ್ರಚಲಿತವಾಗಿದೆ. ಮನುಷ್ಯನು ಆಡುವ ನಾಲ್ಕನೇಯ ಅವಸ್ಥೆಯಾದ ಮಧ್ಯಮ ಎಂಬುದು ಭೂಲೋಕ ವ್ಯಾಪ್ತಿ ಹೊಂದಿ ವ್ಯಾಪಕವಾದ ಶಬ್ಧಬ್ರಹ್ಮ ಎನಿಸುತ್ತದೆ. ಶಬ್ಧಬ್ರಹ್ಮದಲ್ಲಿ ನಿಷ್ಣಾತನಾದರೆ ಪರಬ್ರಹ್ಮವನ್ನು ಹೊಂದ

ಬಹುದು. ಹೀಗೆ ಮಾನವ ಜನ್ಮಕ್ಕೆ ಧ್ಯೇಯವಾದ ಮುಕ್ತಿ ಇದನ್ನು ಅಧ್ಯಯದ ಮಾಡಿದವರಿಗೆ ತಿರುಗಿ ಸಂಸಾರಕ್ಕೆ ಬರುವ ಪ್ರಮೇಯವಿಲ್ಲದೆ ಅಪುನಾವರ್ತಿ ರೂಪವಾದ ಮೋಕ್ಷವೆನಿಸುತ್ತದೆ. ಈ ರೀತಿ ಋಗ್ವಿಧಾನವನ್ನು ವಿವರಿಸಲಾಗಿದೆ.

ಮನ್ಯುಸೂಕ್ತದ ಪೂರ್ವಪೀಠಿಕೆ

ಈ ಸೂಕ್ತಕ್ಕೂ ಹಿಂದಿನ ಸೂಕ್ತಕ್ಕೂ ಎಂದರೆ ಕ್ರೋಧಾಭಿಮಾನಿಯಾದ ದೇವನು ದೇವತೆಯೂ ಮನಸ್ಸಿನಲ್ಲಿ ಉತ್ಪನ್ನವಾಗುವ ಕೆಲವು ಭಾವನೆಗಳನ್ನೇ ದೇವತೆಗಳೆಂದು ಭಾವಿಸಿ ಅವುಗಳನ್ನು ಋಷಿಗಳು ಸ್ತೋತ್ರ ಮಾಡಿರುವ ಸಂದರ್ಭಗಳು ಕೆಲವಿವೆ.

ಇವುಗಳಲ್ಲಿ ಮನ್ಯು (ಕ್ರೋಧ, ಕೋಪ)ವೂ ಒಂದು ಇದರಂತೆ ಶ್ರದ್ಧಾ, ದಾನ, ತಪಸ್ಸು (ಧ್ಯಾನ) ಮೇಧಾ, ಪ್ರಜ್ಞಾ, ಕಾಮ, ಸತ್ಯ, ದಮ, ಶಮ, ಧರ್ಮಯಜ್ಞ, ಮನಸ್ಸು, ಸಂವತ್ಸರ, ಅಥವಾ ಕಾಲ, ಶಾಂತಿ ಆನಂದ ಇತ್ಯಾದಿಗಳೂ ಭಾವನಾ ದೇವತೆಗಳೆಂದು ಪರಿಗಣಿಸಲ್ಪಟ್ಟಿವೆ. ಪ್ರಕೃತ ಸೂಕ್ತದಲ್ಲಿ ಮತ್ತು ಮುಂದಿನ ಸೂಕ್ತದಲ್ಲಿ ಮನ್ಯು ಎಂಬ ಕ್ರೋಧಾಭಿಮಾನಿ ದೇವತೆಯನ್ನು ಮಾತ್ರ ಸ್ತುತಿಸಲಾಗಿದೆ. ಯಜುರ್ವೇದದ ತೈತ್ತರೀಯೋಪನಿಷತ್ತಿನಲ್ಲಿಯೂ ಈ ದೇವತಾತ್ಮಕವಾದ ಒಂದು ಅನುವಾಕವಿದೆ. ಮನ್ಯುರಾಕಾರಿಶತ್ ಎಲೈ ಮನ್ಯುವೆಂಬ ಕ್ರೋಧಾಭಿಮಾನಿ ದೇವನೇ ಇಗೋ ನಿನಗೆ ನಮಸ್ಕಾರವು. ಈ ಪ್ರಪಂಚದಲ್ಲಿ ಎಲ್ಲಾ ಕಾರ್ಯಗಳನ್ನೂ ನೀನೇ ಮಾಡುತ್ತೀಯೆ. ನಾನು ಮಾಡುವುದಿಲ್ಲ ಯಾವ ಕೆಲಸವನ್ನು ಮಾಡಬೇಕಾದರೂ ನೀನೇ ಕರ್ತೃವು. ಮತ್ತು ಪ್ರೇರಕನು ನಾನಲ್ಲ. ಇಂತಹ ಮಹಾಮಹಿಮನಾದ ನಿನಗೆ ಈ ಹವಿಸ್ಸನ್ನು ಅರ್ಪಿಸುವೆನೆಂದು ಈ ಮಂತ್ರದ ಮುಖ್ಯಾಭಿಪ್ರಾಯವು. ಶ್ರದ್ಧಾ, ಮೊದಲಾದ ಇತರ ಭಾವನಾ ದೇವತೆಗಳ ವಿಷಯದಲ್ಲಿಯೂ ಕೆಲವು ಮಂತ್ರಗಳ ಉದಾಹರಣೆಗಳನ್ನು ಕೊಡುತ್ತೇವೆ. ಶ್ರದ್ಧಯಾಗ್ನಿಃ ಶ್ರದ್ಧಾ ದೇವತೆಯ ವಿಷಯವಾಗಿ ಋಗ್ವೇದದಲ್ಲಿ ವಿವರಿಸಿದೆ. ಅನುವಾದವು ಯಸ್ತೇಽ ಮನ್ಯು ಎಂಬ ಈ ಸೂಕ್ತವು ಆರನೆಯ ಅನುವಾಕದಲ್ಲಿ ಹದಿನೈದನೆಯ ಸೂಕ್ತವು. ಇದರಲ್ಲಿ ಏಳು ಋಕ್‌ಗಳು ಇರುವುವು. ಈ ಸೂಕ್ತಕ್ಕೆ ತಪ ಎಂಬ ಋಷಿಯ ಪುತ್ರನಾದ ಮನ್ಯು ಎಂಬುವನು ಋಷಿಯು.

ಈ ಸೂಕ್ತಕ್ಕೂ ಇದರ ಮುಂದಿನ ಸೂಕ್ತಕ್ಕೂ ಮನ್ಯು ದೇವತೆಯು. ಈ ಸೂಕ್ತದ ಮೊದಲನೆಯ ಋಕ್ ಜಗತೀ ಛಂದಸ್ಸು. ಉಳಿದ ಋಕ್ ಗಳು ತ್ರಿಷ್ಟುಪ್ ಛಂದಸ್ಸು. ಅನುಕ್ರಮಣಿಕೆಯಲ್ಲಿ ಯಸ್ತೇಽಮನ್ಯೋ ಸ್ತ್ರಪಸೋ ಮಾನ್ಯೋರ್ವ್ಯಂತು ಜಗತ್ಯಾದಿ ಎಂದು ಹೇಳಿರುವುದು. ಅಜಿರ ಎಂಬ ಅಭಿಚಾರ ಸಾಧನಾಭೂತವಾದ ಯಜ್ಞದಲ್ಲಿ ಈ ಸೂಕ್ತವನ್ನು ನಿವಿದ್ಧಾನ ಸೂಕ್ತವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತ ಸೂಕ್ತದ ತ್ವಯ ಮನ್ಯೋಯಸ್ತೇ ಮನ್ಯು ಎಂಬ ಸೂತ್ರದಿಂದ (ಆ. ೯, ೭) ನಿವೃತ್ತ ವಾಗಿದೆ. ತ್ವಯಮನ್ಯೋ ಎಂಬ ಈ ಸೂಕ್ತವು ಆರನೆಯ ಅನುವಾಕದಲ್ಲಿ ಹದಿನಾರನೆಯ ಸೂಕ್ತವು. ಇದರಲ್ಲಿ ಏಳು ಋಕ್‌ಗಳಿರುವುವು. ಹಿಂದಿನ ಸೂಕ್ತದಂತೆಯೇ ಈ ಸೂಕ್ತಕ್ಕೆ ಋಷಿ ದೇವತೆಗಳು. ಈ ಸೂಕ್ತದ ಮೊದಲಿನ ಮೂರು ಋಕ್‌ಗಳು ತ್ರಿಷ್ಟುಪ್ ಚಂದಸ್ಸು ಮುಂದಿನ ಮೂರು ಋಕ್‌ಗಳು ತ್ರಿಷ್ಟುಪ್ ಛಂದಸ್ಸು ಮುಂದಿನ ಮೂರು ಋಕ್‌ಗಳು ಜಗತೀ ಛಂದಸ್ಸು. ಅನುಕ್ರಮಣಿಕೆಯಲ್ಲಿ "ತ್ವಯಾ ಮನ್ಯೋ ಚತುರ್ಜ ಗತ್ಯಂತಂ ಎಂದು ಹೇಳಿರುವುದು. ಅಜಿರಾ ಎಂಬ ಹೆಸರಿನ ಏಕಾಹೇಷ್ಠಿಯಲ್ಲಿ ಈ ಸೂಕ್ತವನ್ನು ಮರುತ್ವತೀಯ ಶಸ್ತ್ರಮಂತ್ರಗಳಲ್ಲಿ ನಿವಿದ್ಧಾನ ಸೂಕ್ತ ವನ್ನಾಗಿ ಪಠಿಸಬೇಕೆಂದು ನಿರ್ಧಿಷ್ಟವಾದ ಆಶ್ವಲಯನ ಶ್ರೌತ ಸೂತ್ರದ ವಾಕ್ಯವನ್ನು ಹಿಂದೆಯೇ ಉದಾಹರಿಸಲಾಗಿದೆ. ವಿಮೃತ್ಯಭಿಭೂತಿವಜ್ರ ಎಂಬ ಏಕಾಹೇಷ್ಠಿಗಳಲ್ಲಿಯೂ ಈ ಎರಡು ಮನ್ಯು ದೇವತಾಕವಾದ ಸೂಕ್ತ ಗಳನ್ನು ಪಠಿಸಬೇಕೆಂದು ಆಶ್ವಲಯನ ಶ್ರೌತಸೂತ್ರದ ವಿಮೃತ್ಯಭಿಭೂಕ್ಯೋ ದಿಷು, ವಜ್ರಯೋಶ್ಚಮನ್ಯು ಸೂಕ್ತೆ. ಎಂಬ ಸೂತ್ರದಿಂದ (ಆ. ೯, ೮) ನಿವೃತವಾಗಿರುವುದು.

ಮನ್ಯುಸೂಕ್ತದ ಪ್ರತಿಪದಾರ್ಥ ಮತ್ತು ತಾತ್ಪರ್ಯಗಳು

ಸಂಹಿತಾ ಪಾಠ ೧

ಯಸ್ತೇಮನ್ಯೋಽವಿಧದ್ವಜ್ರಸಾಯಕ
ಸಹಓಜಃ ಪುಷ್ಯತಿ ವಿಶ್ವ ಮಾನುಷಕ್ ।
ಸಾಹ್ಯಾಮ ದಾಸಮಾರ್ಯಂ ತ್ವಯಾಯುಜಾ
ಸಹಸ್ಕೃತೇನ ಸಹಸಾ ಸಹಸ್ವತಾ ॥

ಪದಪಾಠ :—

ಯಃ ತೇ ಮನ್ಯೋಽ ಇತಿ, ಅವಿಧತ್, ವಜ್ರ,
ಸಾಯಕ, ಸಹಃ, ಓಜಃ ಪುಷ್ಯತಿ, ವಿಶ್ವಂ, ಆನುಷಕ್ ।
ಸಾಹ್ಯಾಮ, ದಾಸಂ, ಆರ್ಯಂ, ತ್ವಯಾಯುಜಾ,
ಸಹಃ ಕೃತೇನ, ಸಹಸಾ, ಸಹಸ್ವತಾ ॥

ಪ್ರತಿಪದಾರ್ಥ :—

ವಜ್ರ=ವಜ್ರಾಯುಧದಂತೆ ಶಕ್ತಿಯುತನೂ, ಸಾಯಕ=ಶತ್ರುನಾಶಕನಾದ, ಮನ್ಯೋ=ಕ್ರೋಧಾಭಿಮಾನಿ ದೇವನಾದ ಮನ್ಯುವೇ, ಯಃ=ಯಜಮಾನನು, ತೇ=ನಿನ್ನನ್ನುದ್ದೇಶಿಸಿ, ಅವಿಧತ್=ಪೂಜೆಯನ್ನ

ಪೂಜಿಸುವನೋ ಅವನು, ವಿಶ್ವಂ ಸಹಃ=ಸಕಲ ಬಲವನ್ನು, ಓಜಃ= ವೀರ್ಯವನ್ನು, ಆನುಷಕ್=ಸರ್ವದಾ, ಪುಷ್ಯತಿ=ಹೊಂದುತ್ತಾನೆ, ವಯಂ= ನಾವು, ಸಹಸ್ಕೃತೇನ=ಶಕ್ತಿಯುತವಾದ, ಸಹಸಾ=ನಿನ್ನ ಪರಾಕ್ರಮದಿಂದ ಸಹಸ್ಕೃತಾ=ಶತ್ರುಗಳನ್ನು ನಾಶ ಮಾಡಬಲ್ಲ, ತ್ವಯಾಯುಜಾ=ನಿನ್ನ ಜೊತೆಯಲ್ಲಿ, ದಾಸಂ=ನಾಶಕಾರಕನು, ಆರ್ಯಂ=ನಮಗಿಂತಲೂ ಅಧಿಕ ಶಕ್ತಿ ಯುಳ್ಳವನೂ ಆದ ವಿರೋಧಿಯನ್ನು, ಸಾಹ್ಯಾಮಾ=ಸೋಲಿಸು ವಂತಾಗಲಿ.

ತಾತ್ಪರ್ಯ :—

ವಜ್ರಾಯುಧದಂತೆ ಶಕ್ತಿಯುತನೂ, ಶತ್ರುನಾಶಕನೂ ಆದ ಎಲೈ ಕ್ರೋಧಾಭಿಮಾನಿಯಾದ ದೇವನೇ ಯಾವ ಯಜಮಾನನು ನಿನ್ನನ್ನು ಪೂಜಿಸುವನೋ ಅವನು ಸದಾ ವೀರ್ಯವನ್ನು ಸರ್ವದಾ ಹೊಂದುತ್ತಾನೆ. ಶಕ್ತಿಯುತವಾದ ವೀರ್ಯವುಳ್ಳ ನಿನ್ನ ಸಹಾಯದಿಂದ ನಾವು ನಾಶಕರನೂ ಅಧಿಕವಾದ ವೀರ್ಯವುಳ್ಳವನೂ ಆದ ನಮ್ಮ ವಿರೋಧಿಯನ್ನು ಸೋಲಿಸು ವಂತಾಗಲಿ.

ವಿಶೇಷ ವಿಷಯಂಗಳು :—

"ಮನ್ಯು:" ಮನುಷ್ಯ ಶಬ್ದಕ್ಕೆ ಯಾಸ್ಕರು ಮನ್ಯುರ್ಮನ್ಯತೇಃ ದೀಪ್ತಿ ಕರ್ಮಣಃ ಕ್ರೋಧ ಕರ್ಮಣೋ ವಧ ಕರ್ಮಣೇ ವಾ ಮನಂತ್ಯಸ್ಮಾ ದಿಷವಃ (ನಿ. ೧೦-೨೯) ಎಂಬ ನಿರ್ವಚನವನ್ನು ಹೇಳಿದರೆ ಎಂದರೆ "ಮನ್ಯು" ಶಬ್ದವು ಪ್ರಕಾಶಿಸು. ಕೋಪಮಾಡು, ಕೊಲ್ಲು ಎಂಬರ್ಥ ವಿರುವುದರಿಂದ "ಮನ್" ಧಾತುವಿನಿಂದ ನಿಷ್ಪನ್ನವಾಗಿದೆ. ಯುದ್ಧಾದಿಗಳಲ್ಲಿ ಕೋಪದಿಂದ ಶತ್ರುಗಳ ಮೇಲೆ ಬಾಣಗಳನ್ನು ಬಿಡುವುದರಿಂದ ಮನ್ಯು ಶಬ್ದಕ್ಕೆ ಕೋಪ ಎಂದು ಹೆಸರು ಬಂದಿದೆ. ವಜ=ವಜ್ರದ ತ್ಯಾಗಭೂತ ವಜ್ರಾಯುಧದಂತೆ ಬಲಶಾಲಿಯಾದವನು ಕೋಪಬಂದಾಗ ಬಲವು ಹೆಚ್ಚು

ವುದು ಎಂಬುದು ಲೋಕಪ್ರಸಿದ್ಧವಾಗಿದೆ. ಸಹಓಜಃ ಪುಷ್ಯತಿ=ಸಹಃ ಎಂದರೆ ದೇಹಬಲವೂ ಸಾಮರ್ಥ್ಯವೂ ಓಜಃ ಎಂದರೆ ಮನಸ್ಸಿನಲ್ಲಿ ಉಂಟಾಗುವ ಧೈರ್ಯವು ಪರಾಕ್ರಮವು. ಕ್ರೋಧಯುಕ್ತನಾದ ಮನುಷ್ಯನಲ್ಲಿ ಈ ಎರಡು ವಿಧವಾದ ಬಲಗಳು ಹೆಚ್ಚುತ್ತವೆ. ದಾಸಂ ಆರ್ಯಂ ಈ ಶಬ್ಧಗಳಿಗೆ ಭಾಷ್ಯಕಾರರು ದಾಸ ಉಪಕ್ಷಪಯಿತಾರಂ ಆರ್ಯಂ. "ಅಸ್ಮಚತ್ತ್ರೋಧಿಕಂ ಚೋಭಯಂ ನಿಥಂ ಶತ್ರುಂ" ಹಿಂಸಕನಾದ ಶತ್ರು ನಮಗಿಂತಲೂ ಬಲಶಾಲಿಯಾದ ಶತ್ರು ಎಂಬ ಎರಡು ವಿಧವಾಗಿ ಶತ್ರುಗಳು. ಅರ್ಥವಿವರಣೆ ಮಾಡಿದ್ದಾರೆ. ಆದರೆ "ಹಾಸ್ವಂ" ಶಬ್ಧಕ್ಕೆ ಅನಾರ್ಯ ಈ ದೇಶದ ಪೂರ್ವನಿವಾಸಿಯಾದ ಕಪ್ಪುಜನ ಎಂದು "ಆರ್ಯಣ" ಎಂದರೆ ಚಾತುರ್ವರ್ಣಗಳಿಗೆ ಸೇರಿದ ಆರ್ಯ ಜನಾಂಗದವನು ಎಂದು ಅರ್ಥ. ನಮಗೆ ಶತ್ರುಭಾವದಿಂದಿರುವವರು ಎಂದು ಅಭಿಪ್ರಾಯ.

ಸಂಹಿತ ಪಾಠ ೨

ಮನ್ಯುರಿಂದ್ರೋ ಮನ್ಯುರೇವಾಸ ದೇವೋ
ಮನ್ಯುಹೋರ್ತಾ ವರುಣೋ ಜಾತವೇದಾಃ ।
ಮನ್ಯುಂ ವಿಶಈಳತೇ ಮಾನುಷೀರ್ಯಾಃ
ಪಾಹಿನೋ ಮನ್ಯೋ ತಪಸಾ ಸಜೋಷಾಃ ॥

ಪದಪಾಠ :—

ಮನ್ಯು, ಇಂದ್ರಃ, ಮನ್ಯುಃ, ಏವ, ಆಸ, ದೇವಃ, ಹೋತಾ ವರುಣಃ, ಜಾತವೇದಾಃ ಮನ್ಯುಂ ವಿಶಃ ಈಳತೇ ಮಾನುಷಿಃ ಯಾ ಪಾಹಿ ನಃ ಮನ್ಯೋಽಇತಿ ತಪಸಾ ಸಜೋಷಾಃ ॥

ಪ್ರತಿಪದಾರ್ಥ :—

ಮನ್ಯುಃ=ದೇವನೇ, ಇಂದ್ರಃ=ಇಂದ್ರರೂಪನೂ, ಮನ್ಯುಃ ಏವ=ಮನ್ಯುವೇ ದೇವಃ=ಈಶ್ವರನಾಗಿ, ಆಸ=ಆಗಿದ್ದಾನೆ, ಮನ್ಯುಃ=ಮನ್ಯುವೇ, ಹೋತಾ=ಹೋಮ ಸಂಪಾದಕನಾದ ಅಗ್ನಿಯೂ, ಜಾತವೇದಾಃ=ಜಾತಪ್ರಜ್ಞನಾದ, ವರುಣಃ = ವರುಣನು ಆಗಿದ್ದಾನೆ, ಯಾಃ = ಯಾವ, ಮಾನುಷೀಃ ವಿಶಃ = ಮಾನವ ಗುಂಪಿಗೆ ಸೇರಿದ ಪ್ರಜೆಗಳಾಗಿರುವರೋ ಅವರು, ಮನ್ಯುಂ ಏವಂ = ಮನ್ಯುವನ್ನೇ, ಈಳತೇ = ಸ್ತುತಿಸುತ್ತಾರೆ, ಮನ್ಯೋ=ಎಲೈ ಮನ್ಯುದೇವನೇ, ತಪಸಾ=ತಪ ಎಂಬ ನನ್ನ ತಂದೆಯೊಡನೆ ಸಜೋಷಾಃ=ಒಂದುಗೂಡಿದವನಾಗಿ, ಪಾಹಿ=ನಮ್ಮನ್ನು ರಕ್ಷಿಸು.

ತಾತ್ಪರ್ಯ :—

ಮನ್ಯುವೇ ಇಂದ್ರನು, ಮನ್ಯುವೇ ಈಶ್ವರನೂ, ಮನ್ಯುವೇ ಹೋಮ ಸಂಪಾದಕನಾದ ಅಗ್ನಿಯೂ, ಜಾತಾಪ್ರಜ್ಞನಾದ ವರುಣನು ಆಗಿದ್ದಾನೆ. ಯಾರು ಮಾನವರ ಗುಂಪಿಗೆ ಸೇರಿದ ಪ್ರಜೆಗಳಾಗಿರುವರೋ ಅವರು ಮನ್ಯುವನ್ನೇ ಸ್ತುತಿಸುತ್ತಾರೆ. ಎಲೈ ಮನ್ಯುದೇವನೇ ತಪಾ ಎಂಬ ನನ್ನ ತಂದೆಯೊಡನೆ ಒಂದುಗೂಡಿದವನಾಗಿ ನಮ್ಮನ್ನು ರಕ್ಷಿಸು.

ವಿಶೇಷ ವಿಷಯಗಳು :—

ಈ ಋಕ್ಕಿನಲ್ಲಿ ಮನ್ಯುದೇವತೆಯನ್ನು ಪ್ರಶಂಸಿಸುವಾಗ ಈ ಮನ್ಯುದೇವನೇ, ಇಂದ್ರ, ದೇವ, ಹೋತ, ವರುಣಃ ಇತ್ಯಾದಿ ಇತರ ದೇವತೆಗಳ ನಾಮಗಳಿಂದ ಸ್ತುತಿಸಲಾಗಿದೆ. ಎಂದರೆ ಇತರ ದೇವತೆಗಳಲ್ಲಿರುವ ಮಹತ್ ಗುಣಗಳೆಲ್ಲವೂ ಈ ಮನ್ಯುದೇವನಲ್ಲಿದೆ ಎಂಬುದನ್ನು ತೋರಿಸುವುದಕ್ಕಾಗಿ ನಾನಾ ದೇವತೆಗಳ ಹೆಸರಿನಿಂದ ಮನ್ಯುದೇವನನ್ನು ಸಂಬೋಧಿಸಿದರೆ. ಲೋಕ ವ್ಯವಹಾರದಲ್ಲಿಯೂ ಗುಣವಿಶಿಷ್ಟನಾದ ಓರ್ವ ಪುರುಷನನ್ನು

ಹೊಗಳುವಾಗ ನೀನೆ ಇಂದ್ರ, ಚಂದ್ರ, ದೇವೇಂದ್ರ ಮೊದಲಾದ ಶಬ್ದಗಳನು ಉಪಯೋಗಿಸುವುದನ್ನು ಎಲ್ಲರೂ ತಿಳಿದಿರುವರು ಅದರಂತೆ ಇಲ್ಲಿಯೂ ಋಷಿಯೂ ಮನ್ಯುದೇವನನ್ನು ಪ್ರಶಂಸಿದ್ದಾನೆ. ಎಂದು ತಿಳಿಯಬೇಕು. ಹಿಂದೆ ಗೃತ್ಸಮದ ಋಷಿಯು ಸಹ ಈ ರೀತಿ ಸ್ತುತಿಸಿದ್ದಾನೆ.

ಸಂಹಿತಾ ಪಾಠಃ ೩

ಅಭೀಹಿ ಮನ್ಯೋ ತವ ಸಸ್ತವಿಯಾನ್ತ್ಪಸಾ ಯುಜಾ ವಿಜಹಿ ಶತ್ರೂನ್ । ಅಮಿತ್ರಹಾ ವೃತ್ರಹಾ ದಸ್ಯುಹಾಚ ವಿಶ್ವಾ ವಸೂನ್ಯಾಭರಾ ತ್ವಂ ನಃ ॥

ಪದಪಾಠ :—

ಅಭಿ ಇಹಿ ಮನ್ಯೋ ಇತಿ ತವಸಃ ತವಿಯಾನ್ ತಪಸಾ ಯುಜಾ ವಿ ಜಹಿ ಶತ್ರೂನ್ । ಅಮಿತ್ರಹಾ ವೃತ್ರಹಾ ದಸ್ಯುಹಾ ಚ ವಿಶ್ವಾ ವಸೂನಿ ಆ ಭರಾ ತ್ವಂ ನಃ ॥

ಪ್ರತಿಪಧಾರ್ಥ :—

ಮನ್ಯೋ=ಎಲೈ ಮನ್ಯುದೇವನೇ, ಅಭೀಹಿ=ನಮ್ಮಲ್ಲಿಗೆ ದಯ ಮಾಡು, ತವಸಃ=ಶಕ್ತಿಯುತರಿಗಿಂತಲೂ, ಸವಿಯಾಃ=ಅಧಿಕ ಶಕ್ತಿಯುಳ್ಳ ನೀನು, ತಪಸಾಯುಜಾ = ತಪ ಎಂಬ ನಮ್ಮ ತಂದೆಯೊಡನೆ ಕೂಡಿ,

ಶತ್ರೂನ್=ಶತ್ರುಗಳನ್ನು, ವಿಜಹಿ = ನಾಶಪಡಿಸು, ವೃತ್ರಹ=ಸರ್ವವ್ಯಾಪಿಯಾದ ಶತ್ರುನಾಶಕನೂ, ಅಮಿತ್ರಃ=ದ್ರೋಹಿಗಳನ್ನು ನಾಶಮಾಡುವವನು, ದಸ್ಯುಹ=ಶತ್ರುನಾಶಕನಾದ ತ್ವಂ ನೀನು, ವಿಶ್ವಾ = ಸಕಲವಾದ, ವಸೂನಿ= ಧನಗಳನ್ನು, ನಃ=ನಮಗೆ, ಆಭರಾ=ತಂದೋದಗಿಸು,

ತಾತ್ಪರ್ಯ :—

ಎಲೈ ಮನ್ಯುದೇವನೆ ನಮ್ಮಲ್ಲಿಗೆ ದಯಮಾಡು ಶಕ್ತಿಯುತರಿಗಿಂತಲೂ ಅಧಿಕ ಶಕ್ತಿಯುಳ್ಳ ನೀನು ತಪಃ ಎಂಬ ತಮ್ಮ ತಂದೆಯೊಡನೆ ಕೂಡಿ ಶತ್ರುಗಳನ್ನು ಸೋಲಿಸಿ ನಾಶಪಡಿಸು ಸರ್ವವ್ಯಾಪಿಯಾದ ಶತ್ರು ನಾಶಕನೂ ಆದ ನೀನು ಸಕಲ ಧನಗಳನ್ನು ನಮಗೆ ತಂದೊದಗಿಸು.

ಸಂಹಿತ ಪಾಠ ೪

ತ್ವಂ ಹಿ ಮನ್ಯೋ ಅಭಿಭೂತ್ಯೋಜಾಃ ಸ್ವಯಂ
ಭೂರ್ಭಾಮೋ ಅಭಿಮಾತಿಷಾಹಃ ।
ವಿಶ್ವಚರ್ಷಣೀಃ ಸಹುರಿಃ ಸಹಾವಾನ್
ಅಸ್ಮಾಸ್ವೋಜಃ ಪೃತನಾಸು ಧೇಹಿ ॥

ಪದಪಾಠ :—

ತ್ವಂ ಹಿ ಮನ್ಯೋಽಇತಿ ಅಭಿಭೂತಿಽ ಓಜಾಃ ಸ್ವಯಂಭೂಃ ಭಾಮಃ ಅಭಿಮಾತಿಽ ಸಹಃ। ವಿಶ್ವಽಚರ್ಷಣಿಃ ಸಹುರಿಃ ಸಹಾವಾನ್ ಅಸ್ಮಾಸು ಓಜಃ ಪೃತನಾಸು ಧೇಹಿ ॥

ಪ್ರತಿಪದಾರ್ಥ :—

ಮನ್ಯೋ=ಎಲೈ ಮನುಷ್ಯನೇ, ಅಭಿಭೂತ್ಯೋಜಾಃ=ಶತ್ರುಗಳನ್ನು ಸೋಲಿಸಬಲ್ಲ ಶಕ್ತಿಯುಳ್ಳವನು, ಸ್ವಯಂಭೂಃ = ಸ್ವಯಂ ಉತ್ಪನ್ನನೂ, ಭಾಮಃ=ಕ್ರೋಧರೂಪನೂ, ಅಭಿಮಾತಿಷಾಹಃ=ಶತ್ರುನಾಶಕನೂ, ವಿಶ್ವಚರ್ಷಣಿಃ = ಎಲ್ಲವನ್ನೂ ನೋಡಬಲ್ಲವನೂ, ಸಹುರಿಃ = ಸಹನಶೀಲನೂ, ಸಹಾವಾನ್ = ಶತ್ರುಗಳನ್ನು ಸೋಲಿಸಬಲ್ಲವನೂ ಆದ, ತ್ವಂ=ನೀನು, ಅಸ್ಮಾಸು ಪೃತವಾಸು = ನಮ್ಮ ಸಂಗ್ರಮಗಳಲ್ಲಿ, ಓಜಃ = ಶಕ್ತಿಯನ್ನು, ದೇಹಿ = ಕೊಡು ||

ತಾತ್ಪರ್ಯ :—

ಎಲೈ ಮನ್ಯುವೇ ಶತ್ರುನಾಶಕನೂ, ನಿನಾಗಿಯೇ ಸ್ವಯುತ್ಪನ್ನನು, ಕ್ರೋಧರೂಪನೂ, ಸಕಲವನ್ನೂ ನೋಡಬಲ್ಲವನೂ, ಸಹನಶೀಲನೂ ಆದ ನೀನು, ಸಂಗ್ರಾಮಗಳಲ್ಲಿ ಹೋರಾಡಲು ನಮಗೆ ಶಕ್ತಿಯನ್ನು ಕೊಡು.

ಸಂಹಿತಾ ಪಾಠ ೫

ಆಭಾಗಃ ಸನ್ನಪ ಪರೇತೋ ಅಸ್ಮಿ ತವಕ್ರತ್ವಾ ತವಿಷಸ್ಯ ಪ್ರಚೇತಃ । ತಂತ್ವಾ ಮನ್ಯೋ ಅಕ್ರತುರ್ಜಿಹೀಳಾಹದಂ ಸ್ವಾ ತನೂರ್ಬಲದೇಯಾಯಮೇಹಿ ॥

ಪದಪಾಠ :—

ಅಭಾಗಃ ಸನ್ ಅಪ ಪರಾಽಇತಃ ಅಸ್ಮಿ ತವ ಕ್ರತ್ವಾ ತವಿಷಸ್ಯ ಪ್ರಚೇತ ಇತಿ ಪ್ರಽಚೇತಃ । ತಂ ತ್ವಾ ಮನ್ಯೋ ಇತಿ ಅಕ್ರತುಃ ಜಿಹೀಳ ಅಹಂ ಸ್ವಾ ತನೂಃ ಬಲಽದೇಯಾಯ ಮಾ ಆ ಇಹಿ ॥

ಪ್ರತಿಪದಾರ್ಥ :—

ಪ್ರಚೇತಃ ಉತ್ಕೃಷ್ಟವಾದ ಜ್ಞಾನವುಳ್ಳ । ಮನ್ಯೋ-ಎಲೈ ಮನ್ಯುವೇ । ತವಕ್ರತ್ವಾ-ನಿನ್ನ ಕರ್ಮದಲ್ಲಿ ಅಭಾಗಃ ಸನ್-ಭಾಗವನ್ನು ವಹಿಸದೆ । ಅಪಪರೇತೋಸ್ಮಿ-ಶತ್ರುಗಳಿಂದ ಸೋಲಿಸಲ್ಪಟ್ಟಿದ್ದೇನೆ ಮನ್ಯೋ-ಎಲೈ ಮನ್ಯುವೇ । ತೂತ್ವಾ-ಪೂಜ್ಯನಾದ ನಿನ್ನನ್ನು । ಅಕ್ರತುಃ-ಕರ್ಮರಹಿತನಾದ ಅಹಂ-ನಾನು । ಜಿಹೀಳಾ-ಕೋಪಗೊಳ್ಳುವಂತೆ ಮಾಡಿದ್ದೇನೆ । ಸ್ವಾತನೂಃ-ನನ್ನ ಶರೀರ ರೂಪಿಯಾದ ನೀನು । ಬಲದೇಯಾಯ-ನನಗೆ ಶಕ್ತಿಯನ್ನು ಕೊಡಲು । ಮಾ-ನನ್ನಲ್ಲಿಗೆ । ಏಹಿ-ದಯಮಾಡು.

ತಾತ್ಪರ್ಯ :

ಉತ್ಕೃಷ್ಟವಾದ ಜ್ಞಾನವುಳ್ಳ ಎಲೈ ಮನ್ಯುವೇ ನಿನ್ನ ಕರ್ಮದಲ್ಲಿ ಭಾಗವನ್ನು ವಹಿಸದಿದ್ದುದರಿಂದ ನಾನು ಶತ್ರುಗಳಿಂದ ಸೋಲಿಸಲ್ಪಟ್ಟಿದ್ದೇನೆ. ಎಲೈ ಮನ್ಯುವೇ ಪೂಜ್ಯನಾದ ನಿನ್ನನ್ನು ಕರ್ಮರಹಿತನಾದ ನಾನು ಕೋಪಗೊಳ್ಳುವಂತೆ ಮಾಡಿದ್ದೇನೆ. ಶರೀರರದಪಿಯಾದ ನೀನು ನನಗೆ ಶಕ್ತಿಯನ್ನು ಕೊಡಲು ನನ್ನಲ್ಲಿಗೆ ದಯಮಾಡು.

ಸಂಹಿತ ಪಾಠ ೬

ಅಯಂತೇ ಅಸ್ಮ್ಯುಪ ಮೇಹ್ಯರ್ವಾಙ್

ಪ್ರತೀಚೀನಃ ಸಹುರೇ ವಿಶ್ವಧಾಯಃ ।

ಮನ್ಯೋವಜ್ರಿನ್ನಭಿ ಮಾಮಾವವೃತ್ಸ್ವ

ಹನಾವ ದಸ್ಯೂಜ್ರತಬೋಧ್ಯಾಪೇಃ ॥

ಅಯಂ ತೇ ಅಸ್ಮಿ ಉಪ ಮಾ ಆ ಇಹಿ ಅರ್ವಾಙ್

ಪ್ರತೀ ಚೀನಃ ಸಹುರೇ ವಿಶ್ವದಾಯಃ ।

ಮನ್ಯೋ ಇತಿ ವಜ್ರಿನ್ ಅಭಿ ಮಾಂ ಆ ವವೃತ್ಸ್ವ ಹನಾವ

ದಸ್ಯೂನ್ ಉತ ಬೋಧಿ ಆಪೇಃ ॥

ಪ್ರತಿಪದಾರ್ಥ :—

ಸಹುರೇ-ಶತ್ರುಗಳನ್ನು ಸೋಲಿಸುವವನು । ವಿಶ್ವದಾಯಃ- ವಿಶ್ವಾದಾರಕನೂ ಆದ ಎಲೈ ಮನ್ಯುದೇವನೇ । ಅಯಂ-ಈ ಪುರುಷನು । ತೇ-ನಿನಗೆ ಸೇರಿದವನಾಗಿ ಅಸ್ತಿ-ಆಗಿದ್ದಾನೆ । ಪ್ರತಿ ಚೀನಃ-ನನ್ನ ಕಡೆಗೆ ತಿರುಗದವನಾಗಿ । ಮಾ ಅವಾ.ಜಾ-ನನ್ನ ಕಡೆಗೆ । ಉಪೇಹಿ-ದಯಮಾಡು । ವಜ್ರಿನ್-ವಜ್ರಾಯುಧವನ್ನು ಧರಿಸಿರುವ । ಮನ್ಯೋ-ಮನ್ಯುದೇವನೇ । ಮಾಂ-ನನ್ನಲ್ಲಿಗೆ । ಅಭ್ಯಾವವೃತ್ಸ್ವ-ಹಿಂತಿರುಗಿ ಬಾ । ದಸ್ಯೂನ್-ಶತ್ರುಗಳನ್ನು । ಹನಾವ-ನಾವಿಬ್ಬರೂ ಸೇರಿ ಕೊಲ್ಲೋಣ । ಉತ್ಕಾ-ಮತ್ತು ಅಪೇಃ-ನಿನ್ನ ಬಂಧುವಾದ ನನ್ನನ್ನು । ಬೋಧಿ-ಸಹಾಯಾರ್ಹ ನೆಂದು ತಿಳಿ.

ತಾತ್ಪರ್ಯ :—

ಶತ್ರುಗಳನ್ನು ಸೋಲಿಸುವವನೂ, ವಿಶ್ವಧಾರಕನೂ ಆದ ಎಲೈ ಮನ್ಯುವೇ ಈ ಯಜಮಾನನು ನಿನಗೆ ಸೇರಿದವನು. ನನ್ನ ಕಡೆಗೆ ತಿರುಗಿ ಬಾ. ವಜ್ರಾಯುಧಧಾರಿಯಾದ ಎಲೈ ಮನ್ಯುವೇ ನನ್ನಲ್ಲಿಗೆ ಹಿಂತಿರುಗಿ ಬಾ. ನಾವಿಬ್ಬರೂ ಸೇರಿ ಶತ್ರುಗಳನ್ನು ಕೊಲ್ಲೋಣ: ನಿನ್ನ ಬಂಧುವಾದ ನನ್ನನ್ನು ಸಹಾಯಾರ್ಹನೆಂದು ತಿಳಿ

ಅಭಿಪ್ರೇಹಿ ದಕ್ಷಿಣತೋಭವಾ ಮೇಧಾ

ವೃತ್ರಾಣಿ ಜಂಘನಾವಭೂರಿ ।

ಜುಹೋಮಿಂತೇ ಧರುಣಂ ಮಧ್ವೋ

ಅಗ್ರಮುಭಾ ಉಪಾಂಶು ಪ್ರಥಮಾಪಿಭಾವ ॥

ಪದಪಾಠ :—

ಅಭೀ ಪ್ರ ಇಹಿ ದಕ್ಷಿಣತಃ ಭವ ಮೇ ಅಧ ವೃತ್ರಾಣೀ ಜಂಘನಾವ ಭೂರಿ ।

ಜುಹೋಮಿ ತೇ ಧರುಣಂ ಮಧ್ವಃ ಅಗ್ರಂ ಉಭೌ ಉಪಃಅಂಶು ಪ್ರಥಮಾ ಪಿಭಾವ ॥

ಪ್ರತಿಪದಾರ್ಥ :—

(ಎಲೈ ಮನ್ಯುವೇ) ಅಭಾಪ್ರೇಹಿ—ನನಗಭಿಮುಖವಾಗಿ ಬಾ । ಮೇ—ನನ್ನ । ದಕ್ಷಿಣತಃ—ದಕ್ಷಿಣಭಾಗದಲ್ಲಿ । ಭವಾ—ಇಹಕುಳಿತಿರು । ಅಧಾಥಾ—ಅನಂತರದಲ್ಲಿ । ಭೂರಿ ವೃತ್ರಾಣಿ—ಅನೇಕ ಶತ್ರುಗಳನ್ನು । ಜಂಘನಾವ—ನಾವಿಬ್ಬರೂ ಸೇರಿ ಕೊಲ್ಲೋಣ । ತೇ—ನಿನ್ನನ್ನು । ಧರುಣಂ—ಧಾರಕವೂ । ಅಗ್ರಂ-ಶ್ರೇಷ್ಠವೂ । ಮಧ್ವಃ-ಮಧುರವೂ ಆದ ಸೋಮರಸವನ್ನು । ಜುಹೋಮಿ—ಅರ್ಪಿಸುತ್ತೇನೆ. ಉಭೌ—ನಾವಿಬ್ಬರೂ । ಉಪಾಂಶು-ರಹಸ್ಯ

ವಾಗಿ | ಪ್ರಥಮಾ – ಎಲ್ಲರಿಗಿಂತಲೂ ಮೊದಲು ! ಪಿಜಾವ-ಪಾನ ಮಾಡೋಣ.

ತಾತ್ಪರ್ಯ :—

ಎಲೈ ಮನ್ಯುದೇವನೇ ನನಗಭಿಮುಖವಾಗಿ ಬಾ. ನನ್ನ ದಕ್ಷಿಣಭಾಗ ದಲ್ಲಿ ಕುಳಿತುಕೋ. ಅನಂತರ ಅನೇಕ ಶತ್ರುಗಳನ್ನು ನಾವಿಬ್ಬರೂ ಸೇರಿ ಕೊಲ್ಲೋಣ. ನಿನ್ನನ್ನುದ್ದೇಶಿಸಿ ಧಾರಕವೂ ಶ್ರೇಷ್ಠವೂ, ಮಧುರವೂ ಆದ ಸೋಮರಸವನ್ನು ಅರ್ಪಿಸುತ್ತೇವೆ. ನಾವಿಬ್ಬರೂ ರಹಸ್ಯವಾಗಿ ಎಲ್ಲರಿ ಗಿಂತಲೂ ಮೊದಲು ಪಾನಮಾಡೋಣ.

ಸಂಹಿತಾ ಪಾಠ ೮

ತ್ವಯಾ ಮನ್ಯೋ ಸರಥ ಮಾರುಜಂತೋ
ಹರ್ಷಮಾಣಾ ಸೋದೃಷಿತಾ ಮರುತ್ವಃ |
ತಿಗ್ಮೇಷವ ಆಯುಧಾ ಸಂಶಿಶಾನಾ
ಅಭಿಪ್ರಯಂತು ನರೋ ಅಗ್ನಿರೂಪಾಃ ||

ಪದಪಾಠ :—

ತ್ವಯಾ | ಮನ್ಯೋ ಇತಿ | ಸಽರಥಂ | ಆಽರುಜಂತಃ | ಹರ್ಷಮಾಣಾ ಸಃ | ದೃಷಿತಾಃ | ಮರುತ್ವಃ | ತಿಗ್ಮಽಇಷವಃ | ಆಯುಧಾ | ಸಂಽಶಿಶಾನಾಃ | ಅಭಿ | ಪ್ರ | ಯಂತು | ನರಃ | ಅಗ್ನಿಽರೂಪಾಃ ||

ಪ್ರತಿಪದಾರ್ಥ :—

ಮರುತ್ವಃ – ಮರುತ್‌ಗಳೊಡನೆ ಕೂಡಿದ । ಮನ್ಯೋ – ಎಲೈ ಮನ್ಯುವೇ । ತ್ವಯಾ—ನಿನ್ನೊಡನೆ । ಸರಥಂ—ಸಮಾನವಾದ ರಥವನ್ನು ಹತ್ತಿ । ಆರೇಜಂತಃ—ಹೋಗುತ್ತಿರುವರೋ । ಹರ್ಷಮಾಣಾಸಃ-ಸಂತೋಷ ಯುಕ್ತರೊ, ದೃಷಿತಾಃ-ಪ್ರಭಾವಿತರು, ತಿಗ್ಮೇಷವಃ-ತೀಕ್ಷ್ಣವಾದ ಬಾಣ ಗಳುಳ್ಳವರೂ, ಆಯುಧಾ-ಆಯುಧಗಳನ್ನು । ಸಂಶಿಶಾಳಃ—ಹರಿತ ಮಾಡಿ ಕೊಳ್ಳುವವರಾ—ಯುದ್ಧಕರ್ಮನೇತ್ರಗಳೂ ಆದ ದೇವತೆಗಳೂ, ಅಗ್ನಿ ರೂಪಾಃ-ಅಗ್ನಿರೂಪವನ್ನು ಧರಿಸಿದವರಾಗಿ । ಅಭಿಪ್ರಯತುನುಮಗಭಿವಾಗಿ ಬರಲಿ.

ತಾತ್ಪರ್ಯ :—

ಮರುತ್ತುಗಳೊಡನೆ ಕೂಡಿದ ಎಲೈ ಮನ್ಯುವೇ ನಿನ್ನೊಡನೆ ಸಮಾನ ವಾದ ರಥವನ್ನು ಹತ್ತಿ ಹೋಗುತ್ತಿರುವರು. ಸಂತೋಷಯುಕ್ತರೂ, ಪ್ರಭಾವಯುತರೂ, ತೀಕ್ಷ್ಣವಾದ ಬಾಣಗಳುಳ್ಳವರು ಆಯುಧವನ್ನು ಹರಿತಮಾಡಿಕೊಳ್ಳುವವರು ಯುದ್ಧಕರ್ಮ ನೇತ್ರಗಳೂ ಆದ ದೇವತೆಗಳು ಅಗ್ನಿರೂಪವನ್ನು ಧರಿಸಿದವರಾಗಿ ನಮಗಭಿಮುಖವಾಗಿ ಬರಲಿ.

ವಿಶೇಷ ವಿಷಯಗಳು :—

ಈ ಋಕ್ಕಿಗೆ ಯಾಸ್ಕರು ನಿರುಕ್ತವನ್ನು ಹೇಳಿದ್ದಾರೆ. "ತ್ವಯಾ ಮನ್ಯೋ ಸರಥ ಮಾರುಹ್ಯ ರುಜಂತೋ ಹರ್ಷಮಾಣಾಸೋ ಧೃಷಿತಾ ಮರುತ್ತಸ್ತಿಗ್ಮೇಷವ ಆಯುಃಧಾನಿ ಸಂಶಿಶ್ಯಾಮಾನಾ ಅಭಿಪ್ರಾಯಂತು ನರೋ ಅಗ್ನಿರೂಪಾ ಅಗ್ನಿಕರ್ಮಾಣಃ ಸನ್ನದ್ಧಾಃ ಕವಚನ ಇತಿ" ಎಲೈ ಮನ್ಯುವೇ ನಿನ್ನ ಜೊತೆಯಲ್ಲಿ ಒಂದೇ ರಥದಲ್ಲಿ ಕುಳಿತು ಸಂತೋಷದಿಂದಿರು ವವರು ಯುದ್ಧಾರ್ಥವಾಗಿ ಹೊರಟಿರುವವರೂ ಆದ ನಮ್ಮ ಯುದ್ಧಭಟರು ತಮ್ಮ ಎದುರಾಳಿಗಳಿಂದ ಸೋಲಿಸಲ್ಪಡದಿರುವವರು ರೋಮಾಂಚಿತರಾಗಿ

ತವನ್ಮ ಬಾಣಗಳನ್ನು ಮತ್ತು ಆಯುಧಗಳನ್ನು ಹರಿತಮಾಡುವವರೂ ಅಗ್ನಿ ಅಗ್ನಿಯಂತೆ ದಹನ ಅಥವಾ ವಿಧ್ವಂಸನ ಕರ್ಮದಲ್ಲಿ ನಿರತರಾಗಿಯೂ ಯುದ್ಧಾರ್ಥವಾಗಿ ಕವಚಗಳನ್ನು ಧರಿಸುವವರಾಗಿಯೂ, ಯುದ್ಧಭೂಮಿಯನ್ನು ಕುರಿತು ಹೊರಡಲೆಂದು ನಿರುಕ್ತದ ಮುಖ್ಯಾಭಿಪ್ರಾಯವು.

ಸಂಹಿತ ಪಾಠ ೯

ಅಗ್ನಿರೀವ ಮನ್ಯೋ ತ್ವಿಷಿತಃ ಸಹಸ್ವಸೇನಾನೀರ್ನಃ ಸಹುರೇ ಹೂತಯೇಧಿ । ಹತ್ವಾಯ ಶತ್ರೂನ್ವಿಭಜಸ್ವ ವೇದ ಓಜೋಮಿಮಾನೋ ವಿಮೃಧೋನುದಸ್ವ॥

ಪದ ಪಾಠ :—

ಅಗ್ನಿಃ ಇವ ಮನ್ಯೋ ಇತಿ ತ್ವಿಷಿತಃ ಸಹಸ್ವ ಸೇನಾನಿಃ ನಃ ಸಹುರೇ ಹೂತಃ ಏಧಿ ಹತ್ವಾಯ ಶತ್ರೂನ್ ವಿ ಭಜಸ್ವ ವೇದಃ ಓಜಃ ಮಿಮಾನಃ ವಿ ಮೃಧಃ ನುದಸ್ವ ॥

ಪ್ರತಿಪದಾರ್ಥ :—

ಸಹುರೆ–ಶುತ್ರುಗಳನ್ನು ಸೋಲಿಸುವ ಮನ್ಯೋ–ಎಲೈ ಮನ್ಯುವೇ ಅಗ್ನಿರಿವ–ಅಗ್ನಿಯಂತೆ ತ್ವಿಷಿತಃ–ಪ್ರಕಾಶಯುತನಾಗಿ ಸಹಸ್ವ–ಶತ್ರುಗಳನ್ನು ಪ್ರತಿಭಟಿಸಿ ಸೋಲಿಸು, ಸೇನಾನಿಃ–ಸೇನಾಧಿಪತಿಯಂತೆ, ನಃ–ನಮ್ಮಲ್ಲಿಗೆ ಹುತಃ–ಕರೆಯಲ್ಪಟ್ಟೊಡನೆಯೇ ಏಧಿ–ದಯಮಾಡು. ಶತ್ರೂನ್–ಶತ್ರುಗಳನ್ನು ಹತ್ವಾಯ–ನಾಶಪಡಿಸಿ ವೇದಃ–ಅವರ ಧನ

ವನ್ನು ವಿಭಜಸ್ವ–ನಮಗೆ ಹಂಚು. ಓಜಃ–ಶಕ್ತಿಯನ್ನು ವಿಮಾನಃ–ನಮ್ಮಲ್ಲಿಗೆ ಉತ್ಪನ್ನ ಮಾಡುತ್ತಾ ಮೃದಃ–ಶತ್ರುಗಳನ್ನು ವಿನುದಸ್ವ–ಓಡಿಸಿ ನಾಶಪಡಿಸು.

ತಾತ್ಪರ್ಯ :—

ಶತ್ರುನಾಶಕನಾದ ಎಲೈ ಮನ್ಯುವೇ ಅಗ್ನಿಯಂತೆ ಪ್ರಕಾಶಯುತನಾಗಿ ಶತ್ರುಗಳನ್ನು ಪ್ರತಿಭಟಿಸಿ ಸೇವಿಸಿ ನಮ್ಮಲ್ಲಿಗೆ ಕರೆಯಲ್ಪಟ್ಟೊಡನೆಯೇ ಸೇನಾಧಿಪತಿಯಂತೆ ನಮ್ಮಲ್ಲಿಗೆ ಬಾ. ಶತ್ರುಗಳನ್ನು ನಾಶಪಡಿಸಿ ಅವರ ಧನವನ್ನು ನಮಗೆ ಹಂಚು. ನಮ್ಮಲ್ಲಿ ತಕ್ತಿಯನ್ನು ಉತ್ಪನ್ನ ಮಾಡುತ್ತಾ ಅವರನ್ನು ಓಡಿಸಿ ನಾಶಪಡಿಸು.

ವಿಶೇಷ ವಿಷಯಗಳು :—

ಈ ಋಕ್ಕಿನಲ್ಲಿ "ಅಗ್ನಿರಿವ ಮನ್ಯೋತ್ವಿಷಿತಃ ಸಹಸ್ವ" ಎಂಬ ವಾಕ್ಯಕ್ಕೆ ಯಾಸ್ಕರು ನಿರುಕ್ತವನ್ನು ಹೇಳಿದ್ದಾರೆ. "ಅಗಿರೀವ ಮನ್ಯೋ ತ್ವಿಷಿತಃ ಸಹಸ್ವ ಇತಿ ತಥಾಗ್ನಿರ್ಮಾನವೇಮಂತ್ರೇತ್ವಿಷಿತೇ ಜ್ವಲತೇತ್ವಿಷಿರಿತ್ಯಪ್ಯಸ್ಯ ದೀಪ್ತಿನಾಮ ಭವತಿ" ಇಲ್ಲಿ ತ್ವಿಷಿತಃ ಎಂದರೆ ಪ್ರಕಾಶವಾನವಾದ ಎಂಬರ್ಥವು ತ್ರಿಷಿ ಎಂದರೆ ಕ್ರಾಂತಿ ಪ್ರಕಾಶ ಎಂದರ್ಥವು.

ಸಂಹಿತ ಪಾಠ ೧೦

ಸಹಸ್ವ ಮನ್ಯೋ ಅಭಿಮಾತಿ ಮಸ್ಮೇರುಜನ್ಮೃಣನ್

ಪ್ರಮೃಣನ್ಪ್ರೇಹಿಶತ್ರೂನ್ । ಉಗ್ರನ್ತೇಪಾಜೋನನ್ವಾರು ರುರುಧ್ರೇ

ವಶೀವಶಂ ನಯಸ ಏಕಜತ್ವಂ ॥

ಸಹಸ್ವ ಮನ್ಯೋ ಇತಿ ಅಭಿಮಾತಿಂ ಅಸ್ಮೇಇತಿ ರುಜನ್

ಮೃಣನ್ ಪ್ರಮೃಣನ್ ಪ್ರ ಇಹಿ । ಶತ್ರೂನ್ ಉಗ್ರಂ ತೇ ಪಾಜಃ

ನನು ಆ ರುರುಧ್ರೇ ವಶೀ ವಶಂ ನಯಸೇ ಏಕಜ ತ್ವಂ ॥

ಪ್ರತಿಪದಾರ್ಥ :—

ಮನ್ಯೋ-ಎಲೈ ಮನ್ಯುವೇ, ಅಸ್ಮೇ-ನಮ್ಮ, ಅಭಿಮಾತಿಂ-ಹಿಂಸಕರಾದ ಶತ್ರುಗಳನ್ನು, ಸಹಸ್ವ-ಸೋಲಿಸಲು, ರುಜನ್-ನೋಯಿಸುತ್ತಲೂ, ಮೃಣನ್-ಹಿಂಸಿಸುತ್ತಲೂ, ಪ್ರಮೃಣನ್-ಸಾಯಿಸುತ್ತಲೂ, ಶತ್ರೂನ್-ಶತ್ರುಗಳನ್ನು, ಪ್ರೇಹಿ-ಎದುರಿಸು, ತೇ-ನಿನ್ನ, ಉಗ್ರಂ-ಭಯಂಕರವಾದ ಪಾಜ-ಬಲವನ್ನು, ನನು-ಆರರುದ್ರೇಯಾರು ಎದುರಿಸಬಲ್ಲರು, ಏಕಜಾ-ಅದ್ವಿತಿಯನಾಗಿ, ಉತ್ಪನ್ನನಾದ ಎಲೈ ಮನ್ಯುವೇ, ತ್ವಂ-ನೀನು, ವಶೀ-ಪ್ರಭುವಾಗಿ, ವಶಂ ನಯಸೇ-ಎಲ್ಲರನ್ನು ನಿನ್ನ ವಶ ಮಾಡಿಕೊಳ್ಳುತ್ತೀಯೇ.

ತಾತ್ಪರ್ಯ :—

ಎಲೈ ಮನ್ಯುವೇ ನಮ್ಮ ಹಿಂಸಕವಾದ ಶತ್ರುಗಳನ್ನು ಸೋಲಿಸು. ಅವರನ್ನು ಹಿಂಸಿಸುತ್ತಲೂ, ನಾಶಪಡಿಸುತ್ತಲೂ ಎದುರಿಸು. ನಿನ್ನನ್ನು ನಿನ್ನ ಭಯಂಕರವಾದ ಬಲವನ್ನು ಯಾರು ತಾನೇ ಎದುರಿಸುತ್ತಾರೆ. ಅದ್ವಿತೀಯನಾಗಿ ಉತ್ಪನ್ನವಾದ ಎಲೈ ಮನ್ಯುವೇ ನೀನು ಪ್ರಭುವಾಗಿ ಎಲ್ಲರನ್ನು ನಿನ್ನ ವಶ ಮಾಡಿಕೊಳ್ಳುತ್ತೀಯೆ.

ಸಂಹಿತಾ ಪಾಠಃ ೧೧

ಏಕೋಬಹೂನಾ ಮಸಿ ಮನ್ಯವೀಳಿತೋ ವಿಶಂ ವಿಶವತ್

ಯುಧಯೇ ಸಂಶಿಷಾಧಿ । ಅಕೃತ್ತ ರುಕ್ತ್ವಯಾಯುಜಾ

ವಯಂದ್ಯುಮಂತಷಂ ಘೋಃಂ ವಿಜಯಾಯ ಕೃಣ್ಮಹೇ ॥

ಪದಪಾಠ :—

ಏಕಃ ಬಹೂನಾಮ್ ಅಸಿ ಮನ್ಯೋ ಇತಿ ಈಳಿತಃ ವಿಶಂs

ವಿಶಂ ಯುಧಯೇ ಸಂ ಶಿಶಾಧಿ । ಅಕೃತ್ತsರುಕ್ ತ್ವಯಾ ಯುಜಾ

ವಯಂ ದ್ಯುsಮಂತಂ ಘೋಷಂ ವಿಜಯಾಯ ಕೃಣ್ಮಹೇ ॥

ಪ್ರತಿಪದಾರ್ಥ :—

ಮನೇ-ಎಲೈ ಮನ್ಯುವೇ, ಈಳಿತಃ-ನಮ್ಮಿಂದ ಸ್ತುತವಾದ ನೀನು, ಏಕಃ-ಒಬ್ಬನೇ, ಬಹೂನಾಮಸಿ-ಅನೇಕ ಶತ್ರುಗಳ ನಾಶಕ್ಕೆ ಸಮರ್ಥನಾಗಿದ್ದೀಯೆ,ವಿಶಂ, ವಿಶಂ-ನಮ್ಮ ಶತ್ರು ಜನರೊಡನೆಯೂ, ಯುಧಯೇ-ಯುದ್ಧಮಾಡಲು, ಸಂಶೋಧಿ-ಉತ್ತೇಜನವನ್ನು ಕೊಡು, ಅಕೃತ್ತರುಕ್-ಅಕುಂಠಿತವಾದ ಪ್ರಭೆಯುಳ್ಳ ಎಲೈ ಮನ್ಯುವೇ, ತ್ವಯಾಯುಜಾ-ನಿನ್ನೊಡನೆ ಸೇರಿ, ವಯಂ-ನಾವು, ದ್ಯುಮಂತಂ-ಕಾಂತಿಯುತವಾದ, ಘೋಷಂ-ಯುದ್ಧ ಘೋಷವನ್ನು, ವಿಜಯಾಯ – ಜಯಶಾಲಿಯಾಗಿ ಕೃಣ್ಮಹೆ-ಮಾಡುತ್ತೇವೆ.

ತಾತ್ಪರ್ಯ :—

ಎಲೈ ಮನ್ಯುದೇವನೇ ನಮ್ಮಿಂದ ಸ್ತುತನಾದ ನೀನೊಬ್ಬನೇ ಅನೇಕ ಶತ್ರುಗಳ ನಾಶಕ್ಕೆ ಸಮರ್ಥನಾಗಿದ್ದೀಯೆ. ಎಲ್ಲ ಶತ್ರುಗಳೊಡನೆಯೂ

ಯುದ್ಧಮಾಡಲು ನಮಗೆ ಉತ್ತೇಜನವನ್ನು ಕೊಡು ಅಕುಂಠಿತವಾದ ಪ್ರಭೆಯುಳ್ಳ ಎಲೈ ಮನ್ಯುವೇ ನಿನ್ನೊಡನೆ ಸೇರಿ ನಾವು, ಕಾಂದಿಯುಳ್ಳ ಯುದ್ಧಘೋಷವನ್ನು ನಮ್ಮ ಜಯಸಿದ್ಧಿಗಾಗಿ ಮಾಡುತ್ತೇವೆ.

ಸಂಹಿತಾ ಪಾಠ ೧೨

ವಿಜೇಷಕೃದಿಂದ್ರ ಇವಾ ನವಬ್ರವೋ 3 ಸ್ಮಾಕಂ ಮನ್ಯೋ ಅಧಿಪಾಭವೇ ಹ । ಪ್ರಿಯಂತೇ ನಾಮ ಸಹುರೇ ಗೃಣೀಮಸಿ ವಿದ್ಮಾತಮುತ್ಸಂ ಯತಆಬಭೂಥ ॥

ಪದಪಾಠ :—

ವಿಜೇಷಽಕೃತ್ ಇಂದ್ರಽಇವ ಅನವಽಬ್ರವಃ ಅಸ್ಮಾಕಂ ಮನ್ಯೋ ಇತಿ । ಅಧಿಪಾಃ ಭವ ಇಹ ಪ್ರಿಯಂ ತೇ ನಾಮ ಸಹುರೇ ಗೃಣೀಮಸಿ ವಿದ್ಮ ತಂ ಉತ್ಸಂ ಯತಃ ಆಽಬಭೂಥ ॥

ಪ್ರತಿಪಾದಾರ್ಥ :—

ಮನ್ಯೋ-ಮನ್ಯುವೇ, ಇಂದ್ರ ಇವ-ಇಂದ್ರನಂತೆ, ವಿಜೇಷಕೃತ್-ವಿಜಯಶಾಲಿಯೂ, ಅನವ ಬ್ರವಃ-ನಿಂದಾರಹಿತನೂ ಆದ ನೀನು, ಇಹ-ಈ ಯಜ್ಞದಲ್ಲಿ, ಅಸ್ಮಾಕಂ-ನಮಗೆ, ಅಧಿಪಾಃ-ಪೂರ್ಣ ರಕ್ಷಕನಾಗಿ, ಭವಾ-ಆಗಿರು, ಸಹುರೇ-ಶತ್ರುನಾಶಕನಾದ ಮನ್ಯುವೇ, ತೇ-ನಿನ್ನನ್ನು ಪ್ರಶಂಸಿ ಪ್ರಿಯಂ ನಾಮ-ಹಿತಕರ ಸ್ತೋತ್ರವನ್ನು, ಗೃಣೀ ಮಸೀ-ನಾವು

ಪಠಿಸುತ್ತೇವೆ, ಯತಃ-ಯಾವ ಸ್ತುತಿಯಿಂದ, ಆಬಭೂಥ-ನೀನು ಪುಷ್ಟಿಯನ್ನು ಹೊಂದುವೆಯೋ, ತಮುತ್ಸಂ-ಉತ್ತೇಜಕವಾದ ಆ ಸ್ತುತಿಯನ್ನು ವಿದ್ಮ-ನಾವು ತಿಳಿದಿದ್ದೇವೆ.

ತಾತ್ಪರ್ಯ :—

ಎಲೈ ಮನುಷ್ಯದೇವನೇ ಇಂದ್ರನಂತೆ ವಿಜಯಿಯು ನಿಂದಾರಹಿತನೂ ಆದ ನೀನು ಈ ಯಜ್ಞದಲ್ಲಿ ನಮಗೆ ಪೂರ್ಣವಾದ ರಕ್ಷಕನಾಗಿಯೂ ಶತ್ರುನಾಶಕನಾದ ಎಲೈ ಮನುಷ್ಯನೇ ನಿನ್ನನ್ನು ಪ್ರಶಂಸಿಸಿ ಹಿತಕರವಾದ ಸ್ತೋತ್ರವನ್ನು ನಾವು ಪಠಿಸುತ್ತೇವೆ. ಯಾವ ಸುತಿಯಿಂದ ನೀನು ಪುಷ್ಟಿಯನ್ನು ಹೊಂದುವೆಯೋ ಉತ್ತೇಜಕವಾದ ಅದೇ ಸ್ತುತಿಯನ್ನು ನಾವು ಅರಿತಿದ್ದೇವೆ.

ವಿಶೇಷ ವಿಷಯಗಳು :

ಅನವಬ್ರವಃ ಅನಿಂದಿತ ವಚನಃ-ನಿರ್ದೋಶ ವಚನವುಳ್ಳ, ಈ ಶಬ್ದಕ್ಕೆ ಯಾಸ್ಕರ ಅನವಬ್ರವಃ-ಅನವಬ್ರುವೋಹಿ ನವಕ್ಷಿಪ್ತ ವಚನಃ ವಿಜೇಷಕೃತಿಂದ್ರ ಇವ, ನಾವಬ್ರವಃ, ಇತ್ಯೃಷೀ ನಿಗಮೋ ಭವತೀ (ನಿಃ ೬-೨೯) ಎಂದು ನಿರ್ವಚನವನ್ನು ಹೇಳಿದ್ದಾರೆ. ಅನವಬ್ರವಃ ಎಂದರೆ ತಾನು ಆಡುವ ಮಾತುಗಳಲ್ಲಿ ದೋಷಗಳಿಲ್ಲದಿರುವವನು ಉತ್ತಮವಾದ ವಿರೋಧವಾದ ಅನಿಂದ್ಯ ಅಥವಾ ಸಭ್ಯವಾದ ಮಾತುಗಳು ಎಂದು ಅಭಿಪ್ರಾಯ. ಇಂದ್ರನ ವಾಕ್ಯವು ಆ ರೀತಿ ದೋಷರಹಿತವಾಗಿರುವುದರಿಂದ ಮನು ದೇವತೆಯ ವಾಕ್ಯವೂ ಆ ರೀತಿ ಇರುವುದೆಂದು ಇಲ್ಲಿ ಇಂದ್ರನ ಉದಾಹರಣೆಯನ್ನು ಋಷಿಯು ಕೊಟ್ಟಿದ್ದಾನೆ.

ಸಂಹಿತ ಪಾಠ ೧೩

ಆಭೂತ್ಯಾ ಸಹಜಾ ವಜ್ರಸಾಯಕ ಸಹೋಬಿಭರ್ಷ್ಯಭಿಭೂತ

ಉತ್ತರಂ । ಕೃತ್ವಾನೋ ಮನ್ಯೋಃ ಸಹಮೇದ್ಯೇಧಿ ಮಹಾಧನಸ್ಯ ಪುರುಹೂತ ಸಂಸೃಜಿ ॥

ಪದಪಾಠ :—

ಆ ಭೂತ್ಯಾ ಸಹಃಜಾಃ ವಜ್ರ ಸಾಯಕ ಸಹಃ ಬಿಭರ್ಷಿ ಅಭಿಽಭೂತೇ । ಉತ್ತರಂ ಕೃತ್ವಾ ನಃ ಮನ್ಯೋಃ ಇತಿ ಸಹ ಮೇಧಿ ಏಧಿ ಮಹಾಃಧನಸ್ಯ ಪುರಹೂತ ಸಂಸ್ಕಜೀ ॥

ಪ್ರತಿಪದಾರ್ಥ :—

ವಜ್ರಃ-ವಜ್ರದಂತೆ ಕಠಿಣನೂ, ಸಾಯಕ-ಬಾಣದಂತೆ ಹಿಂಸಕನೂ, ಅಭಿಭೂತೇ-ಶತ್ರುನಾಶಕನೂ ಆದ ಎಲೈ ಮನ್ಯುದೇವನೇ, ಆಭೂತ್ಯಾ-ಶತ್ರು ಪರಾಭವದೊಡನೆ, ಸಹಜಾ-ಕೂಡಾ ಹುಟ್ಟಿದ ನೀನು, ಉತ್ತರಂ-ಪ್ರಶಸ್ಯವಾದ, ಸಹಃ-ಬಲವನ್ನು, ಭಿಭರ್ಷಿಃ-ಧರಿಸಿದ್ದೀಯೋ, ಮಹಾಧನಸ್ಯ-ಯುದ್ಧವೂ, ಸಂಸೃಜೀ-ಪ್ರಾಪ್ತವಾದಾಗ, ಪುರುಹೂತ-ಅನೇಕ ಬಾರಿ ಕರೆಯಲ್ಪಡುವ, ಮನ್ಯೋಃ-ಎಲೈ ಮನ್ಯುವೇ, ಕೃತ್ವಾ ಸಹ-ಯುದ್ಧ ಕರ್ಮದೊಡನಿರುವ, ನಃ-ನಮ್ಮಲ್ಲಿ, ಮೇಧ್ಯೇಧಿ-ಪ್ರೀತಿಯುತವಾಗಿರು.

ತಾತ್ಪರ್ಯ :—

ವಜ್ರದಂತೆ ಕಠಿಣವಾಗಿರುವ, ಬಾಣದಂತೆ ಹಿಂಸಕನೂ ಆದ ಎಲೈ ಮನ್ಯುವೇ ಶತ್ರು ಪರಾಭವರೊಡನೆ ಕೂಡಹುಟ್ಟಿದ ನೀನು ಪ್ರಶಸ್ಯವಾದ ಬಲವನ್ನು ಧರಿಸಿದ್ದೀಯೋ ಯುದ್ಧವು ಪ್ರಾಪ್ತವಾದಾಗ ಅನೇಕ ಬಾರಿ ಕರೆಯಲ್ಪಡುವ ಎಲೈ ಮನ್ಯುವೆ ನಮ್ಮಲ್ಲಿ ಯುದ್ಧ ಕರ್ಮದೊಡನೆ ಪ್ರೀತಿಯುತನಾಗಿರು.

ಸಂಹಿತ ಪಾಠ ೧೪

ಸಂಸೃಷ್ಟಂ ಧನಮುಭಯಂ ಸಮಾಕೃತಮಸ್ಮಭ್ಯಂ ದತ್ತಾಂ ವರುಣಶ್ಚ ಮನ್ಯುಃ । ಭಿಯಂದಧಾನಾಹೃದಯೇಷು ಶತ್ರವಃ ಪರಾಜಿತಾಸೋ ಅಪನಿಲಯಂತಾಂ ॥

ಪದ ಪಾಠ :—

ಸಂಸೃಷ್ಟಂ ಧನಂ ಉಭಯಂ ಸಂಽಆಕೃತಂ ಅಸ್ಮಭ್ಯಂ ದತ್ತಾಂ ವರುಣಃ ಚ ಮನ್ಯುಃ । ಭಿಯಂ ದಧಾನಾಃ ಹೃದಯೇಷು ಶತ್ರವಃ ಪರಾಜಿತಾ ಸಃ ಅಪ ನಿ ಲಯಂತಾಂ ॥

ಪ್ರತಿಪದಾರ್ಥ :—

ವರುಣಃ-ವರುಣನು, ಮನ್ಯುಂ-ಮನ್ಯುವು, ಇಸ್ಮಭ್ಯಂ-ನಮಗೆ, ಸಂಸೃಷ್ಟಂ-ವಿಭಕ್ತವಲ್ಲದುದು, ಉಭಯಂ-ಎರಡೂ ವಿಧವಾದ, ಧನಂ-ಧನವನ್ನು, ಸಮುಕೃತಂ-ನಮ್ಮ ಸ್ವಂತಕ್ಕೆ ಸೇರುವಂತೆ, ದತ್ತಾಂ-ಕೊಡಲಿ, ಹೃದಯೇಷು-ಹೃದಯ, ಭಿಯಾ-ಭೀತಿಯನ್ನು, ದಧಾನಾಃ-ಹೊಂದಿರುವ ಶತ್ರವಃ-ನಮ್ಮ ಶತ್ರುಗಳೂ ಪರಾಜಿತಾಸಃ-ನಮ್ಮಿಂದ ಸೋಲಿಸಲ್ಪಟ್ಟವರಾಗಿ, ಅಪ ನಿಲಯಂತಾಂ-ನಾಶಹೊಂದಲಿ.

ತಾತ್ಪರ್ಯ :—

ವರುಣನೂ ಮನ್ಯುವೂ ನಮಗೆ ವಿಭಕ್ತವಲ್ಲದುದೂ ಎರಡು ವಿಧವಾದುದೂ ಆದ ಧನವನ್ನು ನಮ್ಮ ಸ್ವಂತಕ್ಕೆ ಸೇರುವಂತೆ ಒದಗಿಸಲಿ. ಹೃದಯಗಳಲ್ಲಿ ಭೀತಿಯನ್ನು ಹೊಂದಿರುವ ನಮ್ಮ ಶತ್ರುಗಳು ನಮ್ಮಿಂದ ಸೋಲಿಸಲ್ಪಟ್ಟವರಾಗಿ ನಾಶಹೊಂದಲಿ.

ಇತಿ ಮನ್ಯು ಸೂಕ್ತ ಸಂಪೂರ್ಣವಾದುದು

ವಿಶ್ವಕರ್ಮ ಸೂಕ್ತದಲ್ಲಿ ವಾಕ್‌ಶುದ್ಧಿಯಾಗುವುದಕ್ಕೋಸ್ಕರ ವಾಚಸ್ಪತಿ ಯೆಂಬ ಋಕ್ಕು ಇದೆ. ಅದನ್ನು ಇಲ್ಲಿ ಸ್ಮರಿಸುತ್ತಾ ಈ ಋಕ್ಕನ್ನು ಮುಂದಿಟ್ಟುಕೊಂಡು ನಾವು ಈ ಗ್ರಂಥವನ್ನು ಪ್ರಾರಂಭಿಸಲು ದೇವರ ಕೃಪೆಯಿಂದ ಮತ್ತು ಸರ್ವೇಶ್ವರನ ಕೃಪೆಯಿಂದ ಪ್ರಾರಂಭಿಸುತ್ತೇನೆ.

ವಾಚಸ್ಪತಿಂ ವಿಶ್ವಕರ್ಮಾಣಮೂತಯೇ

ಮನೋಜುವಂ ವಾಜೇ ಅದ್ಯಹುವೇಮ |

ಸನೋ ವಿಶ್ವಾನಿ ಹವನಾನಿ ಜೋಷ

ದ್ವಿಶ್ವ ಶಂಭೂ ರವಸೇ ಸಾಧುಕರ್ಮಾ ||

ವಾಚಸ್ಪತಿಂ = ಮಂತ್ರರೂಪವಾದ ವಾಕ್ಕುಗಳಿಗೂ ಒಡೆಯನೂ, ವಿಶ್ವಕರ್ಮಾಣಂ = ಸಕಲ ಜಗತ್ತಿಗೂ ನಿರ್ಮಾಪಕನು, ಮನೋಜುವಂ = ಮನಸ್ಸಿನಂತೆ ವೇಗವುಳ್ಳವನು ಆದ ವಿಶ್ವಕರ್ಮನನ್ನು, ವಾಜೇ=ಯಜ್ಞದಲ್ಲಿ ಅದ್ಯ=ಈಗ, ಊತಯೇ=ರಕ್ಷಣಾರ್ಥವಾಗಿ, ಹುವೇಮಾ=ಕರೆಯುತ್ತೇನೆ, ವಿಶ್ವಶಂಭೂಃ=ಎಲ್ಲರಿಗೂ ಮಂಗಳಕರವಾದ ಕೆಲಸಗಳನ್ನುಂಟುಮಾಡುವವನೂ, ಸಾಧು ಕರ್ಮ=ಉತ್ತಮವಾದ ಕರ್ಮವುಳ್ಳವನೂ ಆದ, ಸಃ= ವಿಶ್ವಕರ್ಮನೋ, ನಃ=ನಮ್ಮ ರಕ್ಷಣಾರ್ಥವಾಗಿ, ಜೋಷತ್=ಸೇವಿಸಲಿ.

ಮಂತ್ರರೂಪವಾದ ವಾಕ್ಕುಗಳಿಗೆ ಒಡೆಯನು ಸಕಲ ಜಗತ್ತಿಗೂ ನಿರ್ಮಾಪಕನೂ ಮನಸ್ಸಿನಂತೆ ವೇಗವುಳ್ಳವನು ಆದ ವಿಶ್ವಕರ್ಮನನ್ನು ಈಗ ಯಜ್ಞದಲ್ಲಿ ರಕ್ಷಣಾರ್ಥವಾಗಿ ಪ್ರಾರ್ಥಿಸಿ ಕರೆಯುತ್ತೇವೆ. ಎಲ್ಲರಿಗೂ ಮಂಗಳವನ್ನುಂಟುಮಾಡುವವನು ಉತ್ತಮವಾದ ಕರ್ಮವುಳ್ಳವನೂ ಆದ ವಿಶ್ವಕರ್ಮ ದೇವರು ನಮ್ಮ ಸಕಲ ಆಹ್ವಾನಗಳನ್ನು ನಮ್ಮ ರಕ್ಷಣಾರ್ಥವಾಗಿ ಸೇವಿಸಲಿ (ಕೇಳಲಿ).

ಗಣಪತಿ ಸೂಕ್ತದ

ಪೂರ್ವ ಪೀಠಿಕಾ

ನವಮೋಽನುವಾಕೆ ತ್ರಯೋದಶ ಸೂಕ್ತಾನಿ ತಂತ್ರಾತೂನ ಇಂದೇತಿ ನವರ್ಚನಂ ಪ್ರಥಮಂ ಸೂಕ್ತ ಕಣ್ವ ಪುತ್ರಸ್ಯ ಕುಸೀದಿನಿ ಗಾಯತ್ರನ್ಮೈಂದ್ರಂ ಶತಾಚಾನುಕ್ರಮ್ಯತೆ ಆತೂನೋನವ ಕುಸೀದೀಕಾಣ್ವ ಇತಿ ಮಹಾವ್ರತೇ ನಿಷ್ಕೇವಲ್ಯೇ ಗಾಯತ್ರ ತ್ರಿಚಾಶೀತಾ ವೇತ್ ದಾದಿಕೇದ್ವೇ ಸೂಕ್ತೆ, ತಥೈವ ಪಂಚಮಾರಣ್ಯಕೇ ಸೂತ್ರಿತಂಚ ಶೌನಕೇನ, ಆತೂನ ಇಂದ್ರ ಕ್ಷುಮಂತಮಿತಿ ಸೂಕ್ತೇ ಸುಧಾ ದೋಹಾಃ. (ಐ. ಆ. 5-2-3)

ಇತಿ ದ್ವಿತೀಯೆ ಪರ್ಯಾಯೇ ಮೈತ್ರಾವರುಣೆ ಶಸ್ತ್ರ ಆದ್ಯಸ್ತ್ರ್ಯಚಃ ಸೂತ್ರಿತಂಚ, ಆತೂನ ಇದ್ರಕ್ಷುಮಾಂತಂ ಆಪ್ರದ್ರವ ಪರಾವತಃ (ಆ. 6-4) ಇತಿ.

ಅನುವಾದವು ೮ನೆಯ ಮಂಡಲದ ೯ನೆಯ ಅನುವಾಕದಲ್ಲಿ ೧೩ ಸೂಕ್ತಗಳಿರುವವು. ಅವುಗಳಲ್ಲಿ ಆತೂನ ಇಂದ್ರ ಸೂಕ್ತವು ಮೊದಲನೆಯದು. ಇದರಲ್ಲಿ ೯ ಋಕ್ಕುಗಳಿರುವುವು. ಈ ಸೂಕ್ತಕ್ಕೆ ಕಣ್ವ ಪುತ್ರನಾದ ಕುಸೀದೀ ಎಂಬುವನು ಋಷಿಯು. ಇಂದ್ರನು ದೇವತೆಯು ಗಾಯತ್ರಿ ಛಂದಸ್ಸು ಅನುಕ್ರಮಣಿಕೆಯಲ್ಲಿ ಆತೂನೋನವ ಕುಸೀದೀ ಕಾಣ್ವಃ ಎಂದು ಹೇಳಿರುವುದು ಮಹಾ ವ್ರತೇಷ್ಟಿಯಲ್ಲಿ ನಿಶ್ಕೇವಲ್ಯ ಶಸ್ತ್ರ ಮಂತ್ರ ಪಠನದಲ್ಲಿ ಗಾಯತ್ರಿ ಛಂದಸ್ಸಿನ ಋಕ್ಕುಗಳಿಗಾಗಿ ಈ ಸೂಕ್ತದ ಮತ್ತು ಮುಂದಿನ ಸೂಕ್ತದ ವಿನಿಯೋಗವಿರುವುದೆಂದೂ ಐತರೇಯಾರಣ್ಯಕದ ಪಂಚಮಾರಣ್ಯಕದಲ್ಲಿ ಶೌನಕ ಮಹರ್ಷಿಯಿಂದ ಆತೂನ ಇಂದ್ರಕ್ಷುಮಂತಮಿತಿ ಸೂಕ್ತೇ ಸುಧಾ ದೋಹಾಃ ಎಂಬ ವಾಕ್ಯದಿಂದ (ಐ.ಆ. 5-2-3) ನಿರ್ದಿಷ್ಟವಾಗಿರುವುದು, ಮತ್ತು ಎರಡನೆ ಪರ್ಯಾಯದಲ್ಲಿ ಮೈತ್ರಾವರುಣನೆಂಬ ಋತ್ವಿಜನು

ಪಠಿಸುವ ಶಸ್ತ್ರ ಮಂತ್ರಗಳಲ್ಲಿ ಈ ಸೂಕ್ತದ ಮೊದಲ ಮೂರು ಋಕ್ಕು ಗಳನ್ನು ಸ್ತೋತ್ರೀಯ ತೃಚವನ್ನಾಗಿ ಪಠಿಸಬೇಕೆಂದು ಆಶ್ವಲಯನ ಶ್ರೌತ ಸೂತ್ರದ ಆತವಾನ ಇಂದ್ರ ಕ್ಷುಮಂತಂ ಆಪ್ರದ್ರವ ಪರಾವತಃ, ಎಂಬ ಸೂತ್ರ ದಿಂದ (ಅ. 6.4) ವಿವೃತವಾಗಿರುವುದು.

ಸೂಕ್ತ ೮೧, ಮಂಡಲ ೮, ಅನುವಾಕಃ ೮೧, ಸೂಕ್ತ ೪.

ಅಷ್ಟಕ ೬, ಅಧ್ಯಾಯ ೫, ವರ್ಗ ೩೭, ೩೮. ಸೂಕ್ತದಲ್ಲಿರುವ ಋಕ್ಸಂಖ್ಯೆ ೯, ಋಷಿಃ ಕಂಸೀದೀ ಕಾಣ್ವಃ, ದೇವತಾ ಅಗ್ನಿಃ, ಛಂದಃ, ಗಾಯಿತ್ರಿ.

ಸಂಹಿತ ಪಾಠ ೧

ಆತೂನ ಇಂದ್ರಕ್ಷುಮಂತಂ ಚಿತ್ರಂ ಗ್ರಾಭಂ ಸಂಗೃಭಾಯ

ಮಹಾ ಹಸ್ತೀ ದಕ್ಷಿಣೇನ ॥೧॥

ಪದ ಪಾಠ :—

ಆ ತೂ ನಃ ಇಂದ್ರ ಕ್ಷುಽಮಂತಂ ಚಿತ್ರಂ ಗ್ರಾಭಂ ಸಂಗೃಭಾಯ

ಮಹಾಽಹಸ್ತೀ ದಕ್ಷಿಣೇನ ॥೧॥

ಪ್ರತಿಪದಾರ್ಥ :—

ಇಂದ್ರ=ಎಲೈ ಇಂದ್ರನೇ, ಮಹಾಽಹಸ್ತಿ=ಮಹತ್ವವುಳ್ಳ, (ದೊಡ್ಡ) ಹಸ್ತಯುತನಾದ ನೀನು, ತ =ಒಡನೆಯೇ, ನಃ=ನಮಗೆ ದಾನಮಾಡಲು, ಕ್ಷುಮಂತಂ=ಪ್ರಶಸ್ತವಾದುದು, ಗ್ರಾಭಂ=ಗ್ರಹಣ ಯೋಗ್ಯವಾದುದೂ ಆದ ಧನವನ್ನು ದಕ್ಷಿಣೇನ–ಬಲಗೈಯಿಂದ ಆಸಂಗೃಭಾಯಾ=ಹಿಡಿದುಕೊ.

ತಾತ್ಪರ್ಯ :—

ಎಲೈ ಇಂದ್ರನೇ ಮಹತ್ವವುಳ್ಳ ಹಸ್ತಯುತವಾದ ನೀನು ನಮಗೆ ಒಡನೆಯೇ ದಾನ ಮಾಡಲು ಪ್ರಶಸ್ತವಾದುದೂ, ಆಕರ್ಷಕವಾದುದೂ, ಗ್ರಹಣ ಯೋಗ್ಯವಾದುದೂ ಆದ ಧನವನ್ನು ಬಲಗೈಯಿಂದ ಹಿಡಿದುಕೊ.

ಸಂಹಿತ ಪಾಠ ೨

ವಿದ್ಮಾಹಿತ್ವಾ ತುವಿ ಕೂರ್ಮಿಂ ತುವಿದೇಷ್ಣಂ ತುವೀಮಘಂ।

ತುವಿ ಮಾತ್ರಮವೋಭಿಃ ॥೨॥

ಪದಪಾಠ :—

ವಿದ್ಮ ಹಿ ತ್ವಾ ತು ವೀಕೂರ್ಮಿಂ ತು ವಿದೇಷ್ಣಂ

ತುವಿಮಘಂ । ತುವೀಮಾತ್ರಂ ಅವಃ ಏಭಿಃ ॥

ಪ್ರತಿಪದಾರ್ಥ :—

(ಎಲೈ ಇಂದ್ರನೇ) ತ್ವಾ=ನಿನ್ನನ್ನು, ತುವಿಕೂರ್ಮಿಂ = ಬಹುವಿಧ ವಾದ, ಕರ್ಮವುಳ್ಳವನೆಂದೂ, ತುವಿದೆಷ್ಣಂ=ಪ್ರಭೂತವಾಗಿ ದಾನಮಾಡುವ ನೆಂದೂ, ತವಿಮಘಂ=ಪ್ರಭೂತವಾದ ಧನವುಳ್ಳವನೆಂದೂ, ತುವಿಮಾತ್ರ= ವಿಸ್ತೃತವಾದ ಪ್ರಮಾಣವುಳ್ಳವನೆಂದು, ಅವೋಭಾಃ = ರಕ್ಷಣಶಾಯಯುತ ನೆಂದೂ, ವಿದ್ಮಹಿ=ನಾವು ತಿಳಿದೇಇದ್ದೇವೆ.

ತಾತ್ಪರ್ಯ :—

ಎಲೈ ಇಂದ್ರನೇ ನಿನ್ನನ್ನು ಅನೇಕ ವಿಧವಾದ ಕರ್ಮವುಳ್ಳವನೆಂದೂ ಪ್ರಭೂತವಾಗಿ ದಾನಮಾಡುವವನೆಂದೂ, ಪ್ರಭೂತವಾದ ಧನವುಳ್ಳವ

ನಾವು ತಿಳಿದೇಇದ್ದೆವೆ.

ಸಂಹಿತ ಪಾಠ ೩

ನಹಿತ್ವಾ ಶೂರದೇವಾ ನಮರ್ತಾಸೋದಿತ್ಸಂತಂ । ಭೀಮಂ
ನಗಾಂ ವಾರಯಂತೇ ॥೩॥

ಪದಪಾಠ :—

ನಹಿತ್ವಾ ಶೂರ ದೇವಾಃ ನ ಮರ್ತಾ ಸಃ ದಿತ್ಸಂತ ಭೀಮಂ
ನ ಗಾಂ ವಾರಯಂತೇ ॥

ಪ್ರತಿಪದಾರ್ಥ :—

ಶೂರ=ಪರಾಕ್ರಮಿಯಾದ, ಎಲೈ ಇಂದ್ರನೇ, ಭೀಮಂ=ಭಯಂಕರವಾದ, ಗಾಂ ನ=ವೃಷಭವನ್ನು ತಡೆಯಲು ಹೇಗೆ ಸಾಧ್ಯವಿಲ್ಲವೋ ಹಾಗೆ, ದಿತ್ಸಂತಂ=ದಾನಮಾಡಲಿಚ್ಛೆಯುಳ್ಳ, ತ್ವಾ=ನಿನ್ನನ್ನು, ದೇವಾಃ=ದೇವತೆಗಳು, ನಹಿ ವಾರಯಂತೇ=ತಡೆಯಲಾರರು, ಮರ್ತಾಸಃ=ಮಾನವರು, ನ=ತಡೆಯಲಾರರು.

ತಾತ್ಪರ್ಯ :—

ಪರಾಕ್ರಮಿಯಾದ ಎಲೈ ಇಂದ್ರನೇ ಭಯಂಕರವಾದ ವೃಷಭವನ್ನು ತಡೆಯಲು ಹೇಗೆ ಸಾಧ್ಯವಿಲ್ಲವೋ ಹಾಗೆ ದಾನ ಮಾಡಲಿಚ್ಛೆಯುಳ್ಳ ನಿನ್ನನ್ನು ದೇವತೆಗಳು ತಡೆಯಲಾರರು, ಮಾನವರು ತಡೆಯಲಾರರು.